

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING BAGALKOT

Volume : 07 | Issue : 158 | Wednesday 26-02-2025 | E-mail : maruti.b.hosamani76@gmail.com | Page: 4 | Price : Rs. 1/-


## ಡೆಂಗ್ಯೂ ರೋಗ ತಡೆಗೆ, ಲಾರ್ವಾ ಉತ್ಪತ್ತಿ ತಾಣಗಳ ನಿರ್ಮೂಲನೆ: ಮನೆ ಮನೆಗೆ ಸಮೀಕ್ಷೆ ಜನಜಾಗೃತಿ

**ಸಿಹಿ ಕಹಿ ಸುದ್ದಿ,**

**ಬೆನಕಟ್ಟಿ** : ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನ ಬೆನಕಟ್ಟಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟ, ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹಯೋಗದಲ್ಲಿ ಬೆನಕಟ್ಟಿ ಗ್ರಾಮದಲ್ಲಿ "ಡೆಂಗ್ಯೂ ನಿಯಂತ್ರಣ ಮುಂಜಾಗ್ರತೆ ಆರೋಗ್ಯ ಅರಿವು ಜಾಗೃತಿ ಆಯೋಜಿಸಲಾಗಿತ್ತು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್. ಎಸ್ ಅಂಗಡಿ "ನಿಮ್ಮ ಆರೋಗ್ಯ ನಮ್ಮ ಬದ್ಧತೆ" ಸಾಂಕ್ರಾಮಿಕ ರೋಗಗಳ ತಡೆಗೆ ಕೀಟಜನ್ಯ ರೋಗಗಳ ನಿಯಂತ್ರಣ ತಡೆಗೆ ಮುಂಜಾಗ್ರತೆಯೇ ಮುಖ್ಯ. ಮುಂಜಾಗ್ರತೆ ಕ್ರಮಗಳನ್ನು ಪಾಲಿಸಿ ಆಸ್ಪತ್ರೆಗೆ ಅಲೆದಾಟ ತಪ್ಪಿಸಿ ಕೊಳ್ಳಿ ಡೆಂಗ್ಯೂ, ಚಿಕೂನ್ ಗುನ್ಯಾ, ಮಲೇರಿಯಾ, ಮೆದಳು ಜ್ವರ ಆನೇಕಾಲು




ರೋಗಗಳಿಂದ ತಪ್ಪಿಸಿ ಕೊಳ್ಳಲು ಸೊಳ್ಳೆ ಉತ್ಪತ್ತಿ ಲಾರ್ವಾ ತಡೆಗೆ ಕುಟುಂಬ ಸದಸ್ಯರು ಜವಾಬ್ದಾರಿ ನಿಭಾಯಿಸಬೇಕು ಮನೆ ಸುತ್ತ ಮುತ್ತ ಪರಿಸರ ಸ್ವಚ್ಛತೆ ನೀರಿನ ಸಂಗ್ರಹಗಳ ಮೇಲೆ ತಪ್ಪದೇ ಮುಚ್ಚಳಿಕೆ ಹಾಕಬೇಕು, ಸೊಳ್ಳೆ ಬತ್ತಿ ಸೊಳ್ಳೆ ಪರದೆ ಬಳಸಬೇಕು ಜ್ವರ ತಲೆ ನೋವು ನಿಶಕ್ತಿ ದೇಹದ ಮೇಲೆ ದದ್ದು ಗಂಧೆಗಳು ಕಾಣಿಸಿದರೆ ಭಯ ಬೇಡ ಸರಕಾರಿ ಆಸ್ಪತ್ರೆಗಳಲ್ಲಿ ಪರೀಕ್ಷೆ ಚಿಕಿತ್ಸೆ ಉಚಿತವಾಗಿರುತ್ತದೆ. ಡೆಂಗ್ಯೂ, ಚಿಕೂನ್ ಗುನ್ಯಾ ರೋಗಕ್ಕೆ ನಿರ್ಧಾರಿತ ಚಿಕಿತ್ಸೆಯಿಲ್ಲ. ರೋಗ ಲಕ್ಷಣಗಳ ಅನುಸಾರ ತಜ್ಞ ವೈದ್ಯರು ಚಿಕಿತ್ಸೆ ಸಲಹೆ ನೀಡುತ್ತಾರೆ. ಬೆನಕಟ್ಟಿ ಗ್ರಾಮದಲ್ಲಿ ಮೂರು ತಂಡಗಳು ರಚಿಸಿ ಲಾರ್ವಾ ಉತ್ಪತ್ತಿ ತಾಣಗಳ ಸಮೀಕ್ಷೆ ಕೀಟಜನ್ಯ ರೋಗಗಳ ತಡೆ ಮಾಹಿತಿ ಸಂಪರ್ಕ ಆರೋಗ್ಯ ಶಿಕ್ಷಣವನ್ನು ಮನೆ ಮನೆ ಭೇಟಿ ನೀಡಿ ಕುಟುಂಬ ಸದಸ್ಯರುಗಳಿಗೆ ಡೆಂಗ್ಯೂ ರೋಗ ತಡೆಗೆ, ಲಾರ್ವಾ ಉತ್ಪತ್ತಿ ತಾಣಗಳ ನಿರ್ಮೂಲನೆ ಮನೆ ಮನೆ ಸಮೀಕ್ಷೆ ಜನಜಾಗೃತಿ ಮೂಡಿಸಲಾಯಿತು. ಆರೋಗ್ಯ ಅರಿವು ಜನಜಾಗೃತಿ ಕಾರ್ಯದಲ್ಲಿ ಆರೋಗ್ಯ ಇಲಾಖೆಯ ವಿವಿಧ ಹಂತದ ಆರೋಗ್ಯ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಗ್ರಾಮದ ಮುಖಂಡರು ಯುವಕರು ಭಾಗವಹಿಸಿದ್ದರು.

## ರಕ್ತದಲ್ಲಿ ಮುಖ್ಯಮಂತ್ರಿಗಳಿಗೆ ಪತ್ರ ಬರೆದ ಯುವಕ

**ಸಿಹಿ ಕಹಿ ಸುದ್ದಿ,**

**ಲಗಳೂರು** : ಗಜೇಂದ್ರಗಡ ಇಂದಿನ ಕಾಲದ ಯುವಕರು ಪ್ರೀತಿಗಾಗಿ, ತನ್ನ ಪ್ರೇಯಸಿಗಾಗಿ ರಕ್ತದಲ್ಲಿ ಪತ್ರ ಬರೆಯುವದನ್ನು ನೋಡಿದ್ದೇವೆ ಆದರೆ ಇಲ್ಲಿ ಯುವಕನೊಬ್ಬ ರಕ್ತದಲ್ಲಿ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದಾನೆ ಆ ಯುವಕ ಗಜೇಂದ್ರಗಡ ತಾಲೂಕಿನ ನಾಗೇಂದ್ರಗಡ ಗ್ರಾಮದ ಹನಮಂತ ಈರಪ್ಪ ಲಗಳೂರು ಯುವಕ ಒಂದು ಅಭೂತ ಪೂರ್ವ ಸಾಮಾಜಿಕ ಕಾರ್ಯ ಯೋಜನೆ ಯೊಂದನ್ನು ಮಾಡಿದ್ದಾನೆ. ಅದು ಏನು ಅಂದ್ರೆ ಸಮಾಜ ಸೇವೆಗಾಗಿ ತನ್ನ ರಕ್ತವನ್ನು ಪತ್ರದ ರೂಪದಲ್ಲಿ ತೋರಿಸಿದ್ದಾನೆ ವಿಷಯ ಏನು ಅಂ–ದ್ರೆ ಶ್ರೀ ಸಿದ್ದರಾಮಯ್ಯನವರು ಸನ್ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ಸರ್ಕಾರ ಪದವಿ ಪೂರ್ವ ಮತ್ತು ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಲಘು ಉಪಹಾರ ಅಥವಾ ಬಿಸಿ ಊಟವನ್ನು ಕೊಡಬೇಕು ಮತ್ತು ಎಂಟ ನೇ. ತರಗತಿಯ ವಿದ್ಯಾರ್ಥಿಗಳಿಗೆ ಸೈಕಲನ್ನು ಕೊಡಬೇಕು ಎಂದು ಕೇಳಿ ಕೋಳ್ಳುತ್ತೇನೆ ಎಂದು ತನ್ನ ರಕ್ತದಿಂದ ತಾನೇ ಪತ್ರ ಬರೆದಿದ್ದಾನೆ. ಹನುಮಂತನನ್ನು ನಮ್ಮ ಎಸ್.ಕೆ ನ್ಯೂಸ್ ಕನ್ನಡ ಚಾನೆಲ್ ತಂಡವು ಭೇಟಿ ಮಾಡಿದಾಗ ಹಲವಾರು ಮಹತ್ವವಾದ ವಿಷಯಗಳನ್ನು ಹಂಚಿ ಕೊಂಡಿದ್ದಾನೆ




ಇವರ ಈ ಕಾರ್ಯಕ್ಕೆ ನಮ್ಮ ಎಸ್ ಕೆ ನ್ಯೂಸ್ ಕನ್ನಡ ಚಾನೆಲ್ ತಂಡವು ಕೃತಜ್ಞತೆ ಸಲ್ಲಿಸುತ್ತದೆ. ಎಷ್ಟೋ ಜನರು ನಮಗೆ ಯಾಕೆ ಬೇಕು ನಮ್ಮ ಮನೆ, ನಮ್ಮ ಮಕ್ಕಳು, ಎಲ್ಲಾ ಚನ್ನಾಗಿ ಇದ್ದರೆ ಸಾಕು ಎನ್ನೋ ಕಾಲದಲ್ಲಿ ಇಂತಹ ಯುವಕರನ್ನು ನಾವು ಪ್ರೋತ್ಸಾಹ ಮಾಡಬೇಕು ಅಲ್ವಾ ಸ್ನೇಹಿತರೆ ಇವರ ಈ ಕಾರ್ಯಕ್ಕೆ ಜಯ ಸಿಗಲು ನಮ್ಮ ಎಸ್.ಕೆ ನ್ಯೂಸ್ ಕನ್ನಡ ಚಾನೆಲ್ ತಂಡವು ಸದಾ ಬೆನ್ನೆಲು ಬಾಗಿರುತ್ತದೆ ಎಂದು ವರದಿಯಾಗಿದೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್. ವಿ ಸಂಕನಗೌಡ್ರ. ರೋಣ.ಗದಗ**

## ಫೆ 26. ಕ್ಕೆ ನಗರದಲ್ಲಿ ರಕ್ತದಾನ ಶಿಬಿರ ಹಾಗೂ ಇಲಕಲ್ಲ ನಗರ ಸಭೆಯ ಪೌರ ಕಾರ್ಮಿಕರಿಗೂ ಮತ್ತು ಇವರ ಪ್ರತಿಭಾವಂತ: ಮಕ್ಕಳಿಗೆ ವಿಶೇಷ ಸನ್ಮಾನ ಸಮಾರಂಭ

**ಸಿಹಿ ಕಹಿ ಸುದ್ದಿ,**

**ಇಲಕಲ್ಲ** : ಇಲ್ಲಿನ ದೃಡ ಸಂಕಲ್ಪ ಮತ್ತು ಗ್ರಾಮೀಣಾಭಿವೃದ್ಧಿ ಸೇವಾ ಸಂಘ ಇಲಕಲ್ಲ (ರಿ) ಇವರ ಸಂಕಲ್ಪ ಫೌಂಡೇಶನ ಇಲಕಲ್ಲ ವತಿಯಿಂದ ದಿನಾಂಕ 26–02–2025, ಬುಧುವಾರ ಬೆಳಿಗ್ಗೆ 10 ಗಂಟೆಗೆ ಸರ್ಕಾರಿ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ ಏರ್ಪಡಿಸಿದ್ದು, ನಗರ ಸಭೆಯಲ್ಲಿ ಪೌರ ಕಾರ್ಮಿಕರಿಗೆ ಅವರ ಸೇವಾ ಕಾರ್ಯ ಗುರುತಿಸಿ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ, ಮತ್ತು ಪೌರ ಕಾರ್ಮಿಕರ ಪ್ರತಿಭಾವಂತ ಮಕ್ಕಳಿಗೂ



ಸನ್ಮಾನ್ ಮತ್ತು ಸತ್ಕಾರ ಸಮಾರಂಭ ಏರ್ಪಡಿಸಲಾಗಿದೆ ಎಂದು ನಗರ ಘಟಕದ ಅಧ್ಯಕ್ಷ ಈರಣ್ಣ ನಾಗರಹಾಳ ಹೇಳಿದರು. ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ಅದೇ ದಿನ ಸಾಯಂಕಾಲ ಕಂಠಿ ಸರ್ಕಲ್ಲದಲ್ಲಿ ರಾಕಿಂಗ ಸ್ಟಾರ್ ಯಶ್ ಮೆಲೋಡಿಸ್ ಆರ್ಕೆಸ್ಟ್ರಾ ತಂಡ ಬಾಗಲಕೋಟೆ ಇವರಿಂದ ರಸಮಂಜರಿ ಕಾರ್ಯಕ್ರಮ ನಡೆಸಲಾಗುವುದು. ಇದರಲ್ಲಿ ಉತ್ತರ ಕರ್ನಾಟಕದ ಜಾನಪದ ಕೋಗಿಲೆ ಪರಸು ಕೊಲ್ಲೂರ ಅವರಿಂದ ಸಂಗೀತ ಕಾರ್ಯಕ್ರಮವಿದ್ದು. ಶ್ರೀ ಗುರು ಮಹಾಂತ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಶಾಸಕರಾದ ಶ್ರೀ ವಿಜಯಾನಂದ ಕಾಶಪ್ಪನವರ ಚಾಲನೆ ನೀಡಲಿದ್ದಾರೆ. ಎಲ್ಲಾ ಕಲಾಭಿಮಾನಿಗಳು ಆಗಮಿಸ ಬೇಕೆಂದು ವಿನಂತಿಸಿದ್ದಾರೆ. ಪತ್ರಿಕಾ ಗೋಷ್ಠಿಯಲ್ಲಿ ಸಂಘದ ಇನ್ನುಳಿದ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಜಿಲ್ಲಾ ಮಟ್ಟದ ವಿಶೇಷ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಅಬ್ದುಲ್.ಗಫಾರ್.ತಹಶೀಲ್ದಾರ. ಇಲಕಲ್ಲ.ಬಾಗಲಕೋಟೆ**

## ಪುರುಷನ ಯಶಸ್ಸಿನ ಹಿಂದೆ ಸ್ತ್ರೀ ಪ್ರೇರಣೆ ಇರುತ್ತದೆ



**ರಬಕವಿ–ಬನಹಟ್ಟಿ :** ಪುರುಷರ ಯಶಸ್ಸಿನ ಹಿಂದೆ ಸ್ತ್ರೀ ಪ್ರೇರಣೆಯಾಗಿದ್ದಾಳೆ ಎಂದು ಹಿರಿಯ ಸಾಹಿತಿ ಮಲ್ಲಿಕಾರ್ಜುನ ಹುಲಗಬಾಳಿ ಹೇಳಿದರು.

ಅವರು ಬನಹಟ್ಟಿಯ ಶಂಕರಲಿಂಗ ದೇವಸ್ಥಾನದ ಸಮುದಾಯ ಭವನದಲ್ಲಿ ಶಂಕರಲಿಂಗ ಟ್ರಸ್ಟ್ ಕಮೀಟಿಯ ಶ್ರೀ ಶಂಕರಲಿಂಗ ಮಹಿಳಾ ಸಂಘದ ಎರಡನೇ ವಾರ್ಷಿಕೋತ್ಸವ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು.

ಇಂದಿನ ದಿನಮಾನಗಳಲ್ಲಿ ಮಹಿಳೆ ಎಲ್ಲ ರಂಗದಲ್ಲಿ ಮುಂಚೂಣಿಯಲ್ಲಿದ್ದಾಳೆ. ಸಂಘ ಸಂಸ್ಥೆಗಳಲ್ಲಿಯೂ ಮಹಿಳೆಯರು ಜಾಗೃತರಾಗಬೇಕಾಗಿದೆ. ಮಕ್ಕಳು ಯಶಸ್ವಿಯಾಗಿ ಮುನ್ನಡೆಯಲು ಅವರಿಗೆ ಪ್ರೋತ್ಸಾಹ ನೀಡುವ ಕೆಲಸ ತಾಯಂದಿರು ಮಾಡಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಯಲ್ಲಟ್ಟಿಯ ಕೊಣ್ಣೂರ ಆಂಗ್ಲ ಮಾಧ್ಯಮ ಶಾಲೆಯ ಸಂಸ್ಥಾಪಕ ಪ್ರಾಚಾರ್ಯ ಪ್ರೊ. ಬಸವರಾಜ ಕೊಣ್ಣೂರ ಮಾತನಾಡಿ, ತಾಯಿಯ ಹೃದಯ ಎಲ್ಲರನ್ನು ತೃಪ್ತಿ ಪಡಿಸುವ ಗುಣ ಹೊಂದಿರುತ್ತದೆ. ಮಹಿಳೆಯರು ತಾಳ್ಮೆ , ಹೃದಯವಂತಿಕೆ, ಪ್ರೋತ್ಸಾಹದ ಗುಣ ಹೊಂದಿರಬೇಕು. ಮಹಿಳಾ ಶಕ್ತಿ ಇನ್ನಷ್ಟು ವೃದ್ಧಿಸಲಿ. ನಿಮ್ಮ ಸಂಘ ಉತ್ತರೋತ್ತರವಾಗಿ ಬೆಳೆಯಲಿ. ಮಕ್ಕಳಿಗಾಗಿ ಆಸ್ತಿ ಮಾಡದೇ ಮಕ್ಕಳನ್ನೇ ಆಸ್ತಿಯನ್ನಾಗಿ ಬೆಳೆಸಿರಿ. ಉತ್ತಮ ಶಿಕ್ಷಣ ಮತ್ತು ಸಂಸ್ಕಾರವನ್ನು ನೀಡಿ ಎಂದರು.

ಕಾರ್ಯಕ್ರಮದಲ್ಲಿ ಶಿಕ್ಷಕಿ ಸುಜಾತಾ ಯಂಡಿಗೇರಿ, ಶಿಕ್ಷಕ ಶಂಕರ ಯಂಡಿಗೇರಿ, ಪತ್ರಕರ್ತರಾದ ಮಲ್ಲಿಕಾರ್ಜುನ ತುಂಗಳ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಿಳಾ ಸಂಘದ ಅಧ್ಯಕ್ಷೆ ಅನುರಾಧಾ ಹೊರಟ್ಟಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಚನಗಿರೆಪ್ಪ ಗುಣಕಿ, ಕಿರಣ ಆಳಗಿ ಆಗಮಿಸಿದ್ದರು.

ಕಾರ್ಯಕ್ರಮದಲ್ಲಿ ಜ್ಯೋತಿ ಗುಣಕಿ, ರತ್ನಾ ಕೊಳಕಿ, ರೇಖಾ ಕಿನ್ನಾಳ, ರೇವತಿ ಭೂತಿ, ವಾಣಿ ಲುಕ್ಕ, ಶಿಲ್ಪಾ ಅಮಟಿ, ಆಶಾ ಭೂತಿ, ರೂಪಾ ಹಿಂಡಿವಳಿ, ಪೂಜಾ ಜುಂಜಪ್ಪನವರ,ಪಾರ್ವತಿ ಕೊಳಕಿ,ಸುರೇಖಾ ಕೊಳಕಿ, ಮಧು ಕೊಳಕಿ, ರಿಯಾ ಮಟ್ಟಿಕಲ್ಲಿ, ಚಂದ್ರಶೇಖರ ಮಿರ್ಜಿ, ಪ್ರಭು ಗುಣಕಿ, ರೇವಪ್ಪ ಗುಣಕಿ, ವಿನಯ ಮಟ್ಟಿಕಲ್ಲಿ, ಶ್ರೀಶೈಲ ಕೊಳಕಿ, ಗಂಗಪ್ಪ ಹಿಂಡಿವಳಿ, ಶಂಕರ ಜುಂಜಪ್ಪನವರ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಸರ್ವಜ್ಞನ ತ್ರಿಪದಿಗಳು ಸರ್ವಕಾಲಕ್ಕೂ ಪ್ರಸ್ತುತ




**ರಬಕವಿ–ಬನಹಟ್ಟಿ:** ಕನ್ನಡ ನಾಡು ಕಂಡ ದಾರ್ಶನಿಕ ಸರ್ವಜ್ಞರ ತ್ರಿಪದಿಗಳು, ಸರ್ವ ಕಾಲಕ್ಕೂ ಪ್ರಸ್ತುತವಾಗಿದ್ದು, ಇಂದಿನ ಮಕ್ಕಳಿಗೆ ಸರ್ವಜ್ಞರ ತ್ರಿಪದಿಗಳ ಮಹತ್ವವನ್ನು ತಿಳಿಸುವುದರ ಜೊತೆಗೆ ಅವುಗಳನ್ನು ಓದುವಂತೆ ಮಾಡಬೇಕು. ಅವರ ತ್ರಿಪದಿಗಳಲ್ಲಿರುವ ಅಂಶಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸುಂದರ ಸಮಾಜ ನಿರ್ಮಾಣ ಮಾಡಬೇಕು ಎಂದು ರಬಕವಿ ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿ ತಿಳಿಸಿದರು. ಅವರು ಗುರುವಾರ ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ಸರ್ವಜ್ಞರ ಜಯಂತ್ಯುತ್ಸವ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಕೇವಲ ಮೂರು ಸಾಲುಗಳ ಪದ್ಯಗಳಲ್ಲಿ ಜಗತ್ತಿನ ಜ್ಞಾನ, ವೈಚಾರಿಕತೆ, ಮಾನವೀಯ ಮೌಲ್ಯಗಳನ್ನು ಅವರು ತುಂಬಿದ್ದಾರೆ. ಕನ್ನಡದ ಪಾರಂಪರಿಕ ಜನಪದ ಶಬ್ದಗಳನ್ನು ಬಳಸಿ ಅವುಗಳು ಮೂಲಕ ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಪ್ರಯತ್ನ ಮಾಡಿದ್ದಾರೆ. ಅವರು ತ್ರಿಪದಿ ಬ್ರಹ್ಮರಾಗಿದ್ದರು ಎಂದು ತಹಶೀಲ್ದಾರ್ ಸ್ವಾದಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಗುರು ಕುಂಬಾರ, ಶಿಕ್ಷಣ ಸಂಯೋಜಕ ಬಿ.ಎಂ. ಹಳೆಮನಿ, ಮಲ್ಲು ಕುಂಬಾರ, ಶಂಕರ ಕುಂಬಾರ, ಪ್ರಕಾಶ ಕುಂಬಾರ, ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ಗ್ರಾಮ ಲೆಕ್ಕಾಧಿಕಾರಿ ಸದಾಶಿವ ಕುಂಬಾರ,ಚೇತನ ಭಜಂತ್ರಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಎಫ್‌ಎಲ್‌ಎನ್ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಅನುಕೂಲ



**ರಬಕವಿ–ಬನಹಟ್ಟಿ:** ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಎಫ್ ಎನ್ ಎಲ್ ಸಹಾಯಕಾರಿಯಾಗಲಿದೆ ಎಂದು ರಬಕವಿ ಬನಹಟ್ಟಿಯ ಸಿ. ಆರ್. ಪಿ. ಸಂತೋಷ ಬಡ್ಡಿ ತಿಳಿಸಿದರು.

ಅವರು ಗುರುವಾರ ಸಮೀಪದ ರಾಮಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಸ್ತುತ ಸಾಲಿನ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಸಾಮರ್ಥ್ಯ ಕುರಿತು ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಕ್ಕಳಲ್ಲಿರುವ ಸೂಕ್ತ ಪ್ರತಿಭೆಯನ್ನು ಹೊರ ಹಾಕಲು ಇದೊಂದು ಉತ್ತಮ ವೇದಿಕೆಯಾಗಲಿದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಎನ್ನುವ ಕೊರಗನ್ನು ಹೋಗಲಾಡಿಸಲು ಇದು ಸಹಾಯಕಾರಿಯಾಗಲಿದೆ ಎಂದು ಸಂತೋಷ ಬಡ್ಡಿ ತಿಳಿಸಿದರು.

ಶಿಕ್ಷಣ ಸಂಯೋಜಕ ಬಿ. ಎಂ. ಹಳೆಮನಿ ಕಲಿಕಾ ಅಕ್ಷರದ ರಥಕ್ಕೆ ಚಾಲನೆ ನೀಡಿ ಮಾತನಾಡಿ, ಮಕ್ಕಳು ಕಲಿಕಾ ಹಬ್ಬದಂತಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಲಿಕೆಯಲ್ಲಿ ಮುಂಚೂಣಿ ಗೊಳಿಸಿಕೊಳ್ಳಬೇಕು ಎಂದು ತಿಳಿಸಿದರು. ರಾಮಪುರದ ಶಂಕ್ರೆಪ್ಪ ಅಮ್ಮಲಜೇರಿ ಸಾನಿಧ್ಯ ವಹಿಸಿದ್ದರು. ರಾಮಪುರದ ಹಿರಿಯರಾದ ಬಸಪ್ರಭು ಹಟ್ಟಿ, ಎಸ್. ಡಿ. ಎಂ. ಸಿ. ಅಧ್ಯಕ್ಷ ಶ್ರೀಶೈಲ ಹಂದಿಗುಂದ, ಪಿ. ಎಂ. ಬಿಳ್ಳೂರ, ಎ. ಜಿ. ಕಾಖಂಡಕಿ, ಬಿ. ಡಿ. ನೇಮಗೌಡ, ಬಿ. ಬಿ. ಮುಧೋಳ, ವಿ. ಜಿ. ಪಾಟೀಲ, ಎಂ. ಎನ್. ಭಜಂತ್ರಿ, ದಾಕ್ಷಾಯಣಿ ಮಂಡಿ, ಇಬ್ರಾಹಿಂ ಲೋಕಾಪುರ, ಜಿ. ಎಸ್. ಕಲಬುರ್ಗಿ, ಸಂತೋಷಿಮಾ ರಾಮದುರ್ಗ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

### ತೇರದಾಳ ಪುರಸಭೆ ಜೆ.ಇ. ಹಿಟ್ಲರ ಆಗಿದ್ದಾಳೆ

## ಬಿಲ್ ಪಾವತಿಗಾಗಿ ಗುತ್ತಿಗೆದಾರರನಿಂದ ಧರಣಿ ಸತ್ಯಾಗ್ರಹ




**ತೇರದಾಳ** : ಕಾಮಗಾರಿಗಳನ್ನು ಪೂರ್ಣಗೊಳಿಸಿ ಸುಮಾರು ತಿಂಗಳು ಗತಿಸಿದರೂ ಪುರಸಭೆ ಅಭಿಯಂತರೆ ಭಾಗ್ಯಶ್ರೀ ಪಾಟೀಲ್ ಬಿಲ್ ಪಾವತಿಸುತ್ತಿಲ್ಲ ಎಂದು ಆರೋಪಿಸಿ ಪ್ರಥಮ ದರ್ಜೆ ಗುತ್ತಿಗೆದಾರ ಮುರಗೇಶ ಮಿರ್ಜಿ ಪುರಸಭೆ ಕಚೇರಿ ಮುಂದೆ ಗುರುವಾರ ಧರಣಿ ಕೈಗೊಂಡಿದ್ದಾರೆ.

2022–23 ನೇ ಸಾಲಿನಿಂದ 2023–24 ನೇ ಸಾಲಿನಲ್ಲಿ ಪುರಸಭೆ ವ್ಯಾಪ್ತಿಯ ವಾರ್ಡುಗಳಲ್ಲಿ ವಿವಿಧ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, 18.7 ಲಕ್ಷ ಹಣ ಪಾವತಿ ಆಗಬೇಕಿದೆ. ಆದರೆ ಜೆಇ ಅವರು ಬಿಲ್ ಪಾವತಿಸಲು ವಿನಾಕಾರಣ ವಿಳಂಬ ಮಾಡುತ್ತಿದ್ದಾರೆ. ಹಾಗೂ ಕ್ರಿಯಾ ಯೋಜನೆ ಪ್ರಕಾರ ಕೆಲಸ ಮಾಡಿದ್ದರೂ, ಬಿಲ್ ಕಡಿಮೆ ಬರೆಯುತ್ತಿದ್ದಾರೆ. ಹೀಗಾದರೆ ಗುತ್ತಿಗೆದಾರರ ಗತಿ ಏನು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬಿಲ್ ಪಾವತಿಸದ ಕುರಿತು ಪುರಸಭೆ ಬಹುತೇಕ ಸದಸ್ಯರಿಗೆ ಹೇಳಿದರೂ ಜೆಇ

> **ಗುತ್ತಿಗೆದಾರ ಮುರಗೇಶ ಮಿರ್ಜಿ ಅವರು ಕೆಲಸ ಮಾಡಿದಷ್ಟು ಬಿಲ್ ಪಾವತಿಸಲು ನಾವು ತಯಾರು ಇದ್ದೇವೆ. ಆದರೆ ಅವರು ಕ್ರೀಯಾ ಯೋಜನೆಗೆ ಇಟ್ಟಿರುವ ಅಂದಾಜು ಮೊತ್ತದ ಎಲ್ಲ ಹಣವನ್ನು ನೀಡುವಂತೆ ಹೇಳುತ್ತಿದ್ದಾರೆ. ಇದು ಸಾಧ್ಯವಿಲ್ಲ. ಕಾರಣ ಟೆಂಡರ್ನಲ್ಲಿ ಹಣ ಮೀಸಲು ಇಡುವಾಗ ಅಂದಾಜು ಎಂದು ಪರಿಗಣಿಸಲಾಗಿರುತ್ತದೆ. ಕೆಲಸ ಮಾಡಿದಷ್ಟು ಮಾತ್ರ ಹಣ ಪಾವತಿಸಲು ಅವಕಾಶ ಇದೆ. ಇದನ್ನು ಅವರಿಗೆ ಸಾಕಷ್ಟು ಸಲ ಹೇಳಿದ್ದರೂ ಅವರಿಗೆ ಅರ್ಥವಾಗುತ್ತಿಲ್ಲ.**
>
> **। ಆನಂದ ಕೆಸರಗೊಪ್ಪ**
> **ಪುರಸಭೆ ಮುಖ್ಯಾಧಿಕಾರಿ**

ಅವರು ಸ್ಪಂದಿಸುತ್ತಿಲ್ಲ. ಮುಖ್ಯಾಧಿಕಾರಿಗಳು ಕೂಡ ಜೆಇ ಅವರ ಹಿಟ್ಲರ್ ಧೋರಣೆಗೆ ಬೇಸತ್ತು ಅಸಹಾಯಕರಾಗಿದ್ದಾರೆ ಎಂದು ಗುತ್ತಿಗೆದಾರರು ದೂರಿದ್ದಾರೆ. ಟೆಂಡರ್ ವಿಷಯದಲ್ಲಿಯೂ ಕಾನೂನು ಬಾಹಿರವಾಗಿ ನಡೆದುಕೊಂಡಿದ್ದಾರೆ.

ಟೆಂಡರ್ ಮೊತ್ತಕ್ಕಿಂತ ಕಡಿಮೆ ದರಕ್ಕೆ ಟೆಂಡರ್ ಹಾಕಿದ್ದರೂ ಟೆಂಡರ್ಗೆ ಇಟ್ಟ ಮೊತ್ತಕ್ಕೆ ಹಾಕಿದವರಿಗೆ ಟೆಂಡರ್ ಮಂಜೂರು ಮಾಡಿದ್ದಾರೆ. ಇದರಿಂದ ಸರಕಾರದ ಬೊಕ್ಕಸಕ್ಕೂ ನಷ್ಟ ಉಂಟಾಗಿದೆ.

> **ಮುರಗೇಶ ಮಿರ್ಜಿ ಅವರು ಅಧಿಕಾರಿಣಿಯ ವಿರುದ್ಧ ಧರಣಿ ಕೈಗೊಂಡಿರುವುದು ಸರಿಯಲ್ಲ. ಅಧಿಕಾರಿಗಳ ಹಾಗೂ ಗುತ್ತಿಗೆದಾರರ ಹೊಂದಾಣಿಕೆಯಿಂದ ಮಾತ್ರ ಕೆಲಸ ಆಗಲು ಸಾಧ್ಯ. ಕೆಲಸ ಮಾಡಿರುವುದಕ್ಕಿಂತ ಹೆಚ್ಚಿಗೆ ಬಿಲ್ ಪಾವತಿಸು ಅಂದರೆ ಹೇಗೆ ? ಈ ಬಗ್ಗೆ ನಾನು ಮಾತನಾಡಿ ಸರಿಪಡಿಸುತ್ತೇನೆ.**
>
> **। ಶಿಲ್ಪಾ ರೋಡಕರ**
> **ಪುರಸಭೆ ಅಧ್ಯಕ್ಷೆ.**

ತಾನು ಮಾಡಿರುವ ಕಾಮಗಾರಿಗಳನ್ನು ಜೆಇ ಅವರು ಮುಂದೆ ನಿಂತು ಕೆಲಸ ಮಾಡಿಸಿಕೊಂಡಿದ್ದಾರೆ. ಕಾಮಗಾರಿ ಪರಿಶೀಲನೆಯ (ಥರ್ಡ್ ಪಾರ್ಟಿ) ಮೂರನೇ ವ್ಯಕ್ತಿಯಿಂದಲೂ ಕಾಮಗಾರಿ ಕುರಿತು ದಾಖಲೆ ನೀಡಲಾಗಿದೆ. ಆದರೂ ಜೆಇ ಅವರು ಬಿಲ್ ಪಾವತಿಸುತ್ತಿಲ್ಲ. ಪದೇ ಪದೇ ಪುರಸಭೆ ಏಕೆ ಬರುತ್ತೀರಿ ಎಂದು ನಮ್ಮನ್ನೆ ದಬಾಯಿಸುತ್ತಾರೆ. ಹೀಗೇಕೆ ಎಂದು ಕೇಳಿದರೆ ಯಾರಿಗೆ ಬೇಕಾದರು ಹೇಳಿಕೊಳ್ಳಿ ಎಂದು ಉಢಾಪೆ ಉತ್ತರ ನೀಡುತ್ತಿದ್ದಾರೆಂದು ಮುರಗೇಶ ಮಿರ್ಜಿ ಆರೋಪಿಸಿದ್ದಾರೆ. ನನಗೆ ನ್ಯಾಯ ಸಿಗದಿದ್ದರೆ ಆತ್ಮಹತ್ಯೆಯ ದಾರಿ ಹಿಡಿಯಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

## ತೇರದಾಳದಲ್ಲಿ ಕಲಿಕಾ ಹಬ್ಬ ಸರಕಾರಿ ಶಾಲೆಗಳ ಬಗ್ಗೆ ಗೌರವ ಇರಲಿ



**ತೇರದಾಳ :** ಸರಕಾರಿ ಶಾಲೆಗಳಲ್ಲಿ ಕಲಿತವರೇ ಇಂದು ಉನ್ನತ ಹುದ್ದೆಗಳನ್ನು ಅಲಂಕರಿಸಿರುವುದನ್ನು ನೋಡುತ್ತಿದ್ದೇವೆ. ಆದ್ದರಿಂದ ಸರಕಾರ ನೀಡುವ ಸೌಲಭ್ಯಗಳನ್ನು ಪಡೆದುಕೊಂಡು ಸರಕಾರಿ ಶಾಲೆಗಳಲ್ಲಿಯೇ ಶಿಕ್ಷಣ ಪಡೆಯಬೇಕು. ಸರಕಾರಿ ಶಾಲೆಗಳ ಬಗ್ಗೆ ಪ್ರತಿಯೊಬ್ಬರಲ್ಲಿ ಗೌರವ ಇರಲಿ ಎಂದು ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ ಹೇಳಿದರು.

ಇಲ್ಲಿನ ಕೆಜಿಎಸ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ 1 ರಿಂದ 5 ನೇ ತರಗತಿ ಮಕ್ಕಳ ಕ್ಲಸ್ಟರ್ ಮಟ್ಟದ ಮೂಲಭೂತ ಸಾಕ್ಷರತೆ ಹಾಗೂ ಸಂಖ್ಯಾ ಜ್ಞಾನದ ಕಲಿಕಾ ಹಬ್ಬವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಲಿಯಬೇಕು ಎನ್ನುವ ಹಾಗೂ ಸಾಧಿಸಬೇಕೆನ್ನುವ ಸಾಕಷ್ಟು ಪ್ರತಿಭಾವಂತ ಮಕ್ಕಳಿಗೆ ಹಣಕಾಸಿನ ಸಮಸ್ಯೆಯೂ ಉಂಟಾಗುತ್ತದೆ.

ಸರಕಾರಿ ಶಾಲಾ ಮಕ್ಕಳಿಗೆ ಇಂತಹವುಗಳಿಗೆ ಸಾಕಷ್ಟು ಅವಕಾಶ ಇದ್ದು, ಅವುಗಳ ಸದುಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು. ಶಿಕ್ಷಣ ಸಂಯೋಜಕ ಬಿ.ಎಂ.ಹಳೇಮನಿ, ಪಶ್ಚಿಮ ವಲಯದ ಸಿ.ಆರ್.ಪಿ. ಎ. ಆರ್. ಮುಧೋಳ ಮಾತನಾಡಿ, ಮಕ್ಕಳಿಗೆ ಬರೀ ಪಠ್ಯದಲ್ಲಿನ ಚಟುವಟಿಕೆಗಳನ್ನು ಹೇಳದೆ ಚಟುವಟಿಕೆಯಾಧಾರಿತ ಶಿಕ್ಷಣವನ್ನು ಮಕ್ಕಳಿಗೆ ನೀಡುವ ಉದ್ದೇಶ ಕಲಿಕಾ ಹಬ್ಬದ್ದಾಗಿದೆ. ಇದರಿಂದ ಮಕ್ಕಳಲ್ಲಿ ಸೃಜನಶೀಲತೆ ಹೆಚ್ಚಾಗಲು ಸಹಕಾರಿಯಾಗುತ್ತದೆ ಎಂದು ಹೇಳಿದರು. ಪುರಸಭೆ ಉಪಾಧ್ಯಕ್ಷೆ ನಸ್ರೀನ್ಬಾನು ನಗಾರ್ಜಿ, ಎಸ್. ಡಿ. ಎಂ. ಸಿ. ಅಧ್ಯಕ್ಷ ಮಹಾವೀರ ನಂದಗಾಂವ, ಎ. ಎಸ್. ಐ. ಎಂ. ಎಂ. ಗುಂಜಟ್ಟಿ, ಪೂರ್ವ ವಲಯ ಸಿಆರ್‌ಪಿ ಮಹೇಶ ಸೋರಗಾಂವಿ, ಕೆ. ಡಿ. ಮಾಲಗಾಂವಿ, ಶಾನೂರ ಮೋಮಿನ, ಪ್ರಕಾಶ ಹವಾಲ್ದಾರ್, ಧನಂಜಯ ಜಮಖಂಡಿ ಉಪಸ್ಥಿತರಿದ್ದರು.

# ಬಾಣಂತಿಯರ ಆಹಾರ ಮತ್ತು ಆರೈಕೆ (ಕುಶಲವೇ ಕ್ಷೇಮವೇ)





ಬಾಣಂತಿಯರ ಆಹಾರ ವಿಷಯದಲ್ಲಿ ಅತಿಯಾದ ಕಟ್ಟುನಿಟ್ಟು ಬೇಡ. ಹೆರಿಗೆಯಾದ ಮೊದಲೆರಡು ದಿನ ಬಾಣಂತಿಯರಿಗೆ ಮೃದುವಾಗಿ ಬೇಯಿಸಿದ ಅನ್ನ, ಸಾರು, ಇಡ್ಲಿ ಮತ್ತು ಸ್ವಲ್ಪ ಬೇಯಿಸಿದ ತರಕಾರಿ ಕೊಡಬೇಕು. ದಿನಕ್ಕೆರಡು ಬಾರಿ ಹಾಲು ಕೊಡಬೇಕು. ಕುಡಿಯಲು ಕುದಿಸಿ ಆರಿಸಿದ ನೀರನ್ನು ಕೊಡಬೇಕು. ಕೆಲವರು ನೀರು ಕೊಡುವುದೇ ಇಲ್ಲ. ಕೊಟ್ಟರೂ ಅತ್ಯಲ್ಪ ಪ್ರಮಾಣದಲ್ಲಿ ಕೊಡುತ್ತಾರೆ. ನೀರು ಕೊಡದಿದ್ದಲ್ಲಿ ದೇಹದಲ್ಲಿ ನೀರಿನಂಶ ಕಡಿಮೆಯಾಗಿ ಹಾಲು ಕೂಡ ಕಡಿಮೆಯಾಗುತ್ತದೆ. ಸಾಕಷ್ಟು ನೀರು ಕುಡಿಯದಿದ್ದರೆ ಮಲಬದ್ಧತೆಯುಂಟಾಗಿ ಮುಂದುವರಿದು ಮೂಲವ್ಯಾಧಿಯೂ ಕಾಣಿಸಿಕೊಳ್ಳಬಹುದು. ಬಾಣಂತಿಯರು ಸಾಕಷ್ಟು ನೀರು ಕುಡಿದರೆ ಆಹಾರ ಜೀರ್ಣಶಕ್ತಿಯೂ ಹೆಚ್ಚಾಗುತ್ತದೆ.

ಇದಲ್ಲದೇ ಕೆಲವು ಜನರು ಬಾಣಂತಿಯರಿಗೆ ಎಲ್ಲಾ ತರಕಾರಿ ಮತ್ತು ಹಣ್ಣುಗಳನ್ನು ಕೊಡುವುದಿಲ್ಲ. ಈ ಸಮಯದಲ್ಲಿ ಬಾಣಂತಿಯರಿಗೆ ಪೋಷಣೆಯ ಅವಶ್ಯಕತೆ ಹೆಚ್ಚಾಗಿರುತ್ತದೆ. ಆದ್ದರಿಂದ ಅವರಿಗೆ ತಾಜಾ ಹಸಿರು ತರಕಾರಿಗಳು, ಸೊಪ್ಪು ಮತ್ತು ಹಣ್ಣುಗಳನ್ನು ನೀಡಬೇಕು. ಮೊಟ್ಟೆ, ಚಿಕನ್ ಎಲ್ಲವನ್ನೂ ಕೊಡಬಹುದು. ಕೇವಲ ಗಂಜಿ ಮತ್ತು ತಿಳಿಸಾರು ಅನ್ನ ಕೊಟ್ಟರೇ ಸಾಲದು. ಇದರಿಂದ ಅಪೌಷ್ಟಿಕತೆ ಮತ್ತು ರಕ್ತಹೀನತೆ ಉಂಟಾಗಬಹುದು.

ಕೆಲವು ಹಳ್ಳಿಗಳಲ್ಲಿ ಶೌಚಾಲಯವೇ ಇರುವುದಿಲ್ಲ. ಮನೆಯಲ್ಲಿ ಬೆಳಗ್ಗೆ ಬೇಗನೇ ಎದ್ದು ನೈಸರ್ಗಿಕ ಕರೆಯನ್ನು ದೂರ ಹೋಗಿ ಪೂರೈಸಬೇಕಾಗುತ್ತದೆ. ಜೊತೆಗೆ ಅವರ ಜೊತೆಗೊಬ್ಬರು ಹೋಗಬೇಕಾಗುತ್ತದೆ. ಇದು ಬಾಣಂತಿಯರಿಗೆ ಮಾನಸಿಕವಾಗಿ ಕಿರಿಕಿರಿಯಾಗುತ್ತದೆ. ಹೀಗಾಗದಂತೆ ನೋಡಿಕೊಳ್ಳಬೇಕು ಮತ್ತು ಶೌಚಾಲಯ ಮನೆಗೊಂದು ಇರಲೇಬೇಕು. ಕೆಲವರಿಗೆ ಈ ಸಮಯದಲ್ಲಿ ಮನಸ್ಸಿನ ಸ್ಥಿತಿ ಸೂಕ್ಷ್ಮವಾಗಿರಬಹುದು. ಬಾಣಂತಿ ಸನ್ನಿಯೂ ಕಾಣಿಸಿಕೊಳ್ಳಬಹುದು. ಆದ್ದರಿಂದ ಅವರ ಆರೋಗ್ಯ ಮತ್ತು ಆರೈಕೆ ಚೆನ್ನಾಗಿರಲು ಮನೆಯವರು ಕಾಳಜಿ ವಹಿಸಬೇಕು.

**ಪೌಷ್ಟಿಕ ಮತ್ತು ಸಮತೋಲನ ಆಹಾರ**

ಮೊದಲಿಗೆ ಬಾಣಂತಿಯರಿಗೆ ಪೌಷ್ಟಿಕ ಮತ್ತು ಸಮತೋಲನ ಆಹಾರ ಅವಶ್ಯಕ. ಅವರು ದಿನವೂ ಪ್ರತಿ ಸಲ ಬಿಸಿ ಬಿಸಿ ಆಹಾರ ಸೇವಿಸಬೇಕು.

**ಈ ಸಮಯದಲ್ಲಿ ಬಾಣಂತಿಯರಿಗೆ ಪೋಷಣೆಯ ಅವಶ್ಯಕತೆ ಹೆಚ್ಚಾಗಿರುತ್ತದೆ. ಆದ್ದರಿಂದ ಅವರಿಗೆ ತಾಜಾ ಹಸಿರು ತರಕಾರಿಗಳು, ಸೊಪ್ಪು ಮತ್ತು ಹಣ್ಣುಗಳನ್ನು ನೀಡಬೇಕು. ಮೊಟ್ಟೆ, ಚಿಕನ್ ಎಲ್ಲವನ್ನೂ ಕೊಡಬಹುದು.**
**ಬಾಣಂತಿಯರ ಆಹಾರ ಮತ್ತು ಆರೈಕೆ (ಕುಶಲವೇ ಕ್ಷೇಮವೇ)**

ದಂಟು, ಹರಿವೆ, ಪಾಲಕ್, ಹೊನಗೊನೆ. ಸಬ್ಬಸಿಗೆ. ಅಗಸೆ ಸೇರಿದಂತೆ ಎಲ್ಲ ಬಗೆಯ ಸೊಪ್ಪುಗಳನ್ನು ಸೇವಿಸಬೇಕು.

ಗೋಧಿ, ಅಕ್ಕಿ, ಬೆಳ್ಳುಳ್ಳಿ, ಈರುಳ್ಳಿ ಸೇವಿಸಬೇಕು. ಪಪ್ಪಾಯ, ಟೊಮೆಟೊ. ನೆಲ್ಲಿಕಾಯಿ, ಕ್ಯಾರೆಟ್ ಮುಂತಾದವು ಅವರ ಆಹಾರದಲ್ಲಿ ಇರಬೇಕು.

ಹೆಸರುಬೇಳೆ ಪಾಯಸ, ಹಾಲಿನಿಂದ ತಯಾರಿಸಿದ ಖೀರು ಉತ್ತಮ.

ಎದೆಹಾಲಿನ ಪ್ರಮಾಣ ಕಡಿಮೆಯಾಗಿದ್ದಲ್ಲಿ ತಾಜಾ ದಂಟಿನ ಸೊಪ್ಪಿನ ರಸವನ್ನು ಜೇನುತುಪ್ಪ ಮತ್ತು ಏಲಕ್ಕಿ ಪುಡಿಯೊಂದಿಗೆ ಬೆರೆಸಿ ಕುಡಿಯಬೇಕು. ನುಗ್ಗೆಸೊಪ್ಪನ್ನು ಬೇಯಿಸಿ ರಸ ತೆಗೆದು ಕುಡಿಯಬೇಕು. ಹೊನಗೊನೆ ಸೊಪ್ಪಿನ ಪಲ್ಯ ತಿನ್ನಬೇಕು.

ಸಬ್ಬಸಿಗೆ ಸೊಪ್ಪನ್ನು ಹಬೆಯಲ್ಲಿ ಬೇಯಿಸಿ ಉಪ್ಪು ಮತ್ತು ಕಾಳುಮೆಣಸಿನ ಪುಡಿ ಬೆರೆಸಿ ಚಪಾತಿ ಸೇವಿಸಬೇಕು.

ಕೆಸುವಿನ ಗಡ್ಡೆ ಬೇಯಿಸಿ ಅದರಿಂದ ತಯಾರಿಸಿದ ಪಲ್ಯ ಇಲ್ಲದೇ ಮೊಸರುಬಜ್ಜಿ ಸೇವಿಸಬೇಕು. ತೊಂಡೆಹಣ್ಣಿನ ಸೇವನೆಯೂ ಬಿಳಿಯ ಎಳನ್ನು ಹಾಲಿನಲ್ಲಿ ಅರೆದು ಕುಡಿಯಬೇಕು. ಎಳ್ಳಿನ ಪುಡಿಯಲ್ಲಿ ತುಪ್ಪ, ಹಾಲು, ಬೆಲ್ಲ. ಜೇನು ಬೆರೆಸಿ ಕುಡಿಯಬೇಕು.

ಬಾಣಂತಿಯರ ಆಹಾರ ಮತ್ತು ಆರೈಕೆ (ಕುಶಲವೇ ಕ್ಷೇಮವೇ)

ಗರ್ಭಿಣಿಯರಿಗೆ ಪ್ರಮುಖ ಆರೋಗ್ಯ ಸಲಹೆಗಳು (ಕುಶಲವೇ ಕ್ಷೇಮವೇ)

ಅಂಟಿನುಂಡೆ

ಬಾಣಂತಿಯರಿಗೆ ಶಕ್ತಿ ಬರಲೆಂದೇ ಅಂಟಿನುಂಡೆ ಮಾಡಿಕೊಡುವ ಪದ್ಧತಿ ನಮ್ಮಲ್ಲಿದೆ. ಅಂಟಿನುಂಡೆ ಮಾಡಲು ಬೇಕಾದ ಸಾಮಗ್ರಿಗಳು ಹೀಗಿವೆ: ಗಿಟುಕ ಕೊಬ್ಬರಿ 1/2 ಕೆಜಿ, ಉತ್ತುತ್ತಿ 50 ಗ್ರಾಂ, ಗಸಗಸೆ 100 ಗಾಂ, ಲವಂಗ 50 ಗ್ರಾಂ, ಅಂಟು 100 ಗ್ರಾಂ, ಬೆಲ್ಲ 1 ಕೆಜಿ ಬಾದಾಮಿ 100 ಗ್ರಾಂ ಮತ್ತು ತುಪ್ಪ 1/4 ಕೆ.ಜಿ, ಇದನ್ನು ಮಾಡುವ ವಿಧಾನ ಹೀಗಿದೆ: ಮೊದಲಿಗೆ ಕೊಬ್ಬರಿಯನ್ನು ತುರಿದಿಟ್ಟುಕೊಳ್ಳಬೇಕು. ಬಾದಾಮಿ, ಉತ್ತುತ್ತಿ, ಲವಂಗವನ್ನು ಸಣ್ಣ ತುಂಡುಗಳನ್ನಾಗಿಸಿಕೊಳ್ಳಬೇಕು.ಈ ಎಲ್ಲವುಗಳನ್ನು ತುಪ್ಪದಲ್ಲಿ ಕೆಂಪಗಾಗುವವರೆಗೆ ಹುರಿದುಕೊಳ್ಳಬೇಕು. ಗಸಗಸೆ ಅಂಟುವನ್ನು ಕೂಡ ಹುರಿದುಕೊಳ್ಳಬೇಕು. ನಂತರ ಬೆಲ್ಲವನ್ನು ಕರಗಿಸಿ ಅದರೊಂದಿಗೆ ಉಂಡೆ ತಯಾರಿಸಿಕೊಳ್ಳಬೇಕು.

ರಕ್ತಹೀನತೆಗೆ ಮದ್ದು

ಬಾಣಂತಿಯರಿಗೆ ದೇಹದಲ್ಲಿ ರಕ್ತದ ಕೊರತೆ ಕಾಣಿಸಿಕೊಂಡರೆ ರಕ್ತಹೀನತೆ ಉಂಟಾಗುತ್ತದೆ. ಪ್ರತಿಯೊಬ್ಬರ ದೇಹದಲ್ಲಿ ನಿಗದಿತ ಪ್ರಮಾಣದಲ್ಲಿ ರಕ್ತ ಮತ್ತು ಆ ರಕ್ತದಲ್ಲಿ ಹಿಮೋಗ್ಲೋಬಿನ್ ಅಂಶ ಇರಬೇಕಾಗುತ್ತದೆ. ಹಿಮೋಗ್ಲೋಬಿನ್ ಪ್ರಮಾಣ ಮಹಿಳೆಯರಲ್ಲಿ 12 ಗ್ರಾಂ ಗಳಿಗಿಂತ ಕಡಿಮೆಯಾದರೆ ರಕ್ತಹೀನತೆ ಎನ್ನುತ್ತೇವೆ. ಆರು ತಿಂಗಳಿಂದ ಆರು ವರ್ಷದ ಮಕ್ಕಳಲ್ಲಿ 11 ಗ್ರಾಂಗಿಂತ ಕಡಿಮೆಯಾದರೆ ಮತ್ತು ಆರರಿಂದ ಹನ್ನೆರಡು ವರ್ಷದವರಲ್ಲಿ 12 ಗ್ರಾಂಗಿಂತ ಕಡಿಮೆಯಾದರೆ ರಕ್ತಹೀನತೆ ಎನ್ನುತ್ತೇವೆ. ಮುಟ್ಟು ಆರಂಭವಾದಾಗಿನಿಂದ ಮುಟ್ಟು ನಿಲ್ಲುವವರೆಗಿನ ಅವಧಿಯಲ್ಲಿ, ಗರ್ಭಿಣಿ, ಬಾಣಂತಿಯರಲ್ಲಿ ಹಿಮೋಗ್ಲೋಬಿನ್ ಅಂಶ 12 ಗ್ರಾಂಗಿಂತ ಕಡಿಮೆಯಾದಲ್ಲಿ ರಕ್ತಹೀನತೆ ಎಂದು ತಿಳಿಯಬೇಕು.

ಹಿಮೋಗ್ಲೋಬಿನ್ ಉತ್ಪತ್ತಿಯಾಗಲು ಕಬ್ಬಿಣ ಅತ್ಯಂತ ಅವಶ್ಯಕ. ಬಹುತೇಕೆ ಸಂದರ್ಭಗಳಲ್ಲಿ ಆಹಾರದ ಅಭಾವದಿಂದ ಕಬ್ಬಿಣದ ಕೊರತೆಯುಂಟಾಗುತ್ತದೆ. ಕರುಳಿನಲ್ಲಿ ಕೊಕ್ಕೆಹಾಳು ಇದ್ದಲ್ಲಿ ಅ ದಿನಕ್ಕೆ 0.2 ಮಿಲಿ ಗ್ರಾಂ ರಕ್ತವನ್ನು ಸೇವಿಸಿ ರಕ್ತಹೀನತೆ ತರುತ್ತದೆ. ಇದನ್ನು ಬಹಳಷ್ಟು ಜನರು ಅಲಕ್ಷ ಮಾಡುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಸ್ವಚ್ಛತೆಯ ಅಭಾವದಿಂದ ಕೊಕ್ಕೆಹುಳು ದೇಹವನ್ನು ಅನಾಯಾಸವಾಗಿ ಸೇರುತ್ತದೆ. ರಕ್ತಹೀನತೆಗೆ ಇತರೆ ಕಾರಣಗಳೆಂದರೆ ಮಲದಲ್ಲಿ ರಕ್ತ ಹೋಗುವ ಮೂಲವ್ಯಾಧಿ, ಮೂಗಿನಿಂದಾಗುವ ರಕ್ತಸ್ರಾವ ಮುಂತಾದ ಕಾರಣದಿಂದ ರಕ್ತಹೀನತೆ ಉಂಟಾಗುತ್ತದೆ. ಹೆರಿಗೆಯ ಸಮಯದಲ್ಲಿ ಆಗುವ ರಕ್ತಸ್ತಾವ ಮತ್ತು ಗರ್ಭಪಾತದಿಂದ ಆಗುವ ರಕ್ತಸ್ರಾವದಿಂದ ರಕ್ತಹೀನತೆ ಉಂಟಾಗುತ್ತದೆ. ಹೆಣ್ಣುಮಗಳು ಮೇಲಿಂದ ಮೇಲೆ ಗರ್ಭ ಧರಿಸುವುದರಿಂದ ರಕ್ತಹೀನತೆ ಹೆಚ್ಚುತ್ತದೆ ಅವರ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತದೆ.

ಬಾಣಂತಿಯರ ಆಹಾರ ಮತ್ತು ಆರೈಕೆ (ಕುಶಲವೇ ಕ್ಷೇಮವೇ)

ಚಳಿಗಾಲದಲ್ಲಿ ಚರ್ಮದ ಆರೈಕೆ (ಕುಶಲವೇ ಕ್ಷೇಮವೇ)

ಪ್ರತಿ ನೂರು ಮಹಿಳೆಯರಲ್ಲಿ 42 ಜನರು ರಕ್ತಹೀನತೆಯಿಂದ ಬಳಲುತ್ತಿರುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಶೇ. 67 ರಷ್ಟು ಮಹಿಳೆಯರು ರಕ್ತ ತೆಯಿಂದ ಬಳಲುತ್ತಿದ್ದು ಶೇ. 17ರಷ್ಟು ಮಹಿಳೆಯರು ಅತಿರಕ್ತಹೀನತೆಯಿಂದ ಬಳಲುತ್ತಿದ್ದಾರೆ. ರಕ್ತಹೀನತೆಗೆ ಮತ್ತೊಂದು ಪ್ರಮುಖ ಕಾರಣವೆಂದರೆ ಸಣ್ಣ ಕರುಳಿನಲ್ಲಿ ಬಿ12 ಮತ್ತು ಪೋಲಿಕ್ ಆಮ್ಲ ಹೀರಲ್ಪಟ್ಟದಿರುವುದು.

ರಕ್ತಹೀನತೆಯಿದ್ದಾಗ ಆಯಾಸ, ಕೆಲಸ ಮಾಡುವಾಗ ಬೇಗ ಸುಸ್ತು, ಸ್ವಲ್ಪ ದೂರ ನಡೆದರೂ ಉಸಿರಾಡಲು ಕಷ್ಟ, ಎದೆ ಬಡಿತ ಕೇಳುವುದು, ಕೈ ಬೆರಳುಗಳು ಜುಮ್ಮೆನ್ನುವುದು, ಉಗುರುಗಳು ಬಿಳಿಚಿಕೊಳ್ಳುವುದು ಮತ್ತು ನುಣುಪಾಗಿ ಚಮಚದಂತೆ ಹಳ್ಳ ಬೀಳುವುದು, ಕಣ್ಣು, ನಾಲಿಗೆ, ಚರ್ಮ ಬಿಳಿಚಿಕೊಳ್ಳುವುದು, ಹಸಿವೆಯಿಲ್ಲದಿರುವುದು ಮತ್ತು ಬೆಳಗ್ಗೆ ಎದ್ದಾಗ ಮುಖ ಊದಿಕೊಳ್ಳುವುದು ಇಂತಹ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ಆಹಾರದಲ್ಲಿ ಸೊಪ್ಪುಗಳನ್ನು ಹೆಚ್ಚು ಬಳಸಬೇಕು. ಎಲ್ಲ ಸೊಪ್ಪುಗಳಲ್ಲಿ ಕಬ್ಬಿಣದಾಂಶ ಇರುತ್ತದೆ. ಪಾಲಕ್, ಮೆಂತ್ಯ, ಹರಿವೆ. ದಂಟು, ಕೊತ್ತಂಬರಿ, ಕರಿಬೇವು ಎಲ್ಲದರಲ್ಲಿಯೂ ಕಬ್ಬಿಣದಾಂಶ ಇರುತ್ತದೆ. ಚಕ್ರಮುನಿ ಸೊಪ್ಪಿನಲ್ಲಿ ಅತಿಹೆಚ್ಚು ಕಬ್ಬಿಣದಂಶ ಇರುತ್ತದೆ.

**–ಡಾ. ವಸುಂಧರಾ ಭೂಪತಿ**
**ಮೊ: 9986840477**

# ಕರ್ನಾಟಕ ಇಂಟರನ್ಯಾಷನಲ್ ಟ್ರಾವೆಲ್ ಎಕ್ಸಪ್ರೋ–2025

## ಉದ್ದಿಮೆದಾರರು ಭಾಗವಹಿಸುವಿಕೆಗೆ ಆಹ್ವಾನ

**ಬಾಗಲಕೋಟೆ :** ಪ್ರವಾಸೋದ್ಯಮ ಇಲಾಖೆ ವತಿಯಿಂದ ಫೆಬ್ರವರಿ 26, 27, 28 ರಂದು ಅಂತರಾಷ್ಟ್ರೀಯ ಎಕ್ಸಿಬಿಷನ್ ಸೆಂಟರ್ ನೆಲಮಂಗಲ ರಸ್ತೆ, ಬೆಂಗಳೂರಿನಲ್ಲಿ ಎರಡನೇ ಆವೃತ್ತಿಯ "ಏಖಖಿಇ–2025" ಅಂತರಾಷ್ಟ್ರೀಯ ಪ್ರವಾಸೋದ್ಯಮ ಮೇಳ ನಡೆಯಲಿದೆ. ಈ ಪ್ರತಿಷ್ಠಿತ ಕಾರ್ಯಕ್ರಮವು ರಾಜ್ಯದ ಮಹತ್ವದ ಪ್ರವಾಸೋದ್ಯಮ ಕ್ಷೇತ್ರವನ್ನು ಪ್ರದರ್ಶಿಸಲು, ವ್ಯಾಪಾರ ಅವಕಾಶಗಳನ್ನು ಆಕರ್ಷಿಸಲು ಮತ್ತು ಪ್ರಮುಖ ಜಾಗತಿಕ ಪ್ರವಾಸಿ ತಾಣವಾಗಿ ಕರ್ನಾಟಕದ ಸ್ಥಾನವನ್ನು ಬಲಪಡಿಸುವ ವೇದಿಕೆಯಾಗಿದೆ.

ಈ ಕಾರ್ಯಕ್ರಮದಲ್ಲಿ 400 ಕ್ಕೂ ಹೆಚ್ಚು ಆತಿಥೇಯ ಖರೀದಿದಾರರು 30 ಕ್ಕೂ ಹೆಚ್ಚು ವಿದೇಶಗಳಿಂದ 50 ಮಾಧ್ಯಮಗಳು ಭಾಗವಹಿಸಲಿದ್ದು, ಇಂತಹ ಒಂದು ವಿಶೇಷವಾದ ಕಾರ್ಯಕ್ರಮದಲ್ಲಿ ಬಾಗಲಕೋಟೆ ಜಿಲ್ಲೆಯ ಪ್ರವಾಸೋದ್ಯಮ ಕ್ಷೇತ್ರದ ಉದ್ದಿಮೆದಾರರು ಪಾಲ್ಗೊಂಡು ತಮ್ಮ ಉದ್ಯಮ ಹಾಗೂ ಸೇವೆಗಳ ಪ್ರಚಾರ ಪ್ರದರ್ಶನ ಹಾಗೂ ವ್ಯಾಪಾರ ವಿಸ್ತಾರಕ್ಕೆ ಈ ವೇದಿಕೆಯನ್ನು ಬಳಸಿಕೊಳ್ಳಬಹುದು. ಉತ್ತರ ಕರ್ನಾಟಕದ ಉದ್ದಿಮೆದಾರರಿಗೆ ಈ ಮೇಳದಲ್ಲಿ ಮಳಿಗೆ ಸ್ಥಾಪಿಸಲು ರಿಯಾಯಿತಿ ಸಹ ಕಲ್ಪಿಸಲಾಗಿದೆ.

ಜಿಲ್ಲೆಯ ಪರಂಪರೆ, ಐತಿಹಾಸಿಕ ತಾಣಗಳು, ಗ್ರಾಮೀಣ ಹಾಗೂ ನೈಸರ್ಗಿಕ ಪ್ರವಾಸೋದ್ಯಮ ಸೌಲಭ್ಯಗಳನ್ನು ಜಾಗತಿಕ ಮಟ್ಟದಲ್ಲಿ ಗುರುತಿಸಲು ಈ ಮೇಳವು ಅತ್ಯುತ್ತಮ ಅವಕಾಶ ನೀಡುತ್ತದೆ.

ಆದ್ದರಿಂದ ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಜಿಲ್ಲೆಯ ಎಲ್ಲ ಆಸಕ್ತ ಪ್ರವಾಸೋದ್ಯಮ ಕ್ಷೇತ್ರದಲ್ಲಿನ ಉದ್ದಿಮೆದಾರರು, ಸ್ಥಳೀಯ ರೆಸಾರ್ಟ್ ಮಾಲೀಕರು. ಟ್ರಾವೆಲ್ ಅಪರೇಟರ್ಗಳು, ಹೋಟೆಲ್ ಮಾಲೀಕರು ಹಾಗೂ ಇತರೆ ಉದ್ಯಮ ಪ್ರತಿನಿಧಿಗಳಿಗೆ ತಿಳಿಸಿದೆ.

ಕಾರ್ಯಕ್ರಮದ ಹೆಚ್ಚುವರಿ ಮಾಹಿತಿಗಾಗಿ http://www.karnataka travelexpo.org ಅಥವಾ ಬುಕ್ಕಿಂಗ್ ಮಾಡಲು ಮೊನಂ.8722277132, 9845215387 ಅಥವಾ ಬಾಗಲಕೋಟೆ ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕರಾದ ಗೋಪಾಲ ಹಿತ್ತಲಮನಿ (7829538950) ಇವರನ್ನು ಸಂಪರ್ಕಿಸುವಂತೆ ಜಿಲ್ಲಾ ಪ್ರವಾಸೋದ್ಯಮ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

# ಬಾಗಲಕೋಟೆ ಪಟ್ಟಣದಿಂದ ಶಿಗಿಕೇರಿ ಕ್ರಾಸ್ ಮತ್ತು ನೀರಲಕೇರಿವರೆಗೆ ರಸ್ತೆ ಕಾಮಗಾರಿ ತುರ್ತಾಗಿ ಕೈಗೊಳ್ಳಿ

## ಜಿಲ್ಲಾಧಿಕಾರಿ ಜಾನಕಿ ಕೆ.ಎಂಗೆ ಶೋಷಿತರ ಸಂವಿಧಾನದ ಹಕ್ಕುಗಳ ಜಾಗೃತಿ ಸೈನ್ಯದಿಂದ ಮನವಿ

**ಬಾಗಲಕೋಟೆ :** ಪಟ್ಟಣದಿಂದ ಶಿಗಿಕೇರಿ ಕ್ರಾಸ್ ಮತ್ತು ನೀರಲಕೇರಿ ರೈಲ್ವೇ ಗೇಟ್‌ವರೆಗೆರಾಜ್ಯಹೆದ್ದಾರಿ57ಸಂಪೂರ್ಣವಾಗಿ ಹಳ್ಳ ಹಿಡಿದು ಹೋಗಿದ್ದು, ಸುಮಾರು 12 ವರ್ಷಗಳ ಹಿಂದೆ ಡಾಂಬರ್ ಕಂಡ ಈ ರಸ್ತೆ ಇದುವರೆಗೂ ಮರು ಡಾಂಬರೀಕರಣ ಆಗಿರುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆ ಉಂಟಾಗುತ್ತಿದ್ದು ಈ ರಸ್ತೆ ಕಾಮಗಾರಿಯನ್ನುತುರ್ತಾಗಿಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಅವರಿಗೆ ಶೋಷಿತರ ಸಂವಿಧಾನದ ಹಕ್ಕುಗಳ ಜಾಗೃತಿ ಸೈನ್ಯದ ರಾಜ್ಯಾಧ್ಯಕ್ಷ ಎಸ್.ಆರ್.ರಾಠೋಡ ಹಾಗೂ ವಿವಿಧ ಗ್ರಾಮಗಳ ಮುಖಂಡರು ಮನವಿ ಸಲ್ಲಿಸಿದರು. ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿಕೊಂಡ ಅವರು ಕದಾಂಪೂರ ಪುನರ್ವಸತಿ ಕೇಂದ್ರ, ಶಿಗಿಕೇರಿ, ಶಿರಗುಪ್ಪಿ ಎಲ್.ಟಿ, ಸಂಗೊಂದಿ ಪುನರ್ವಸತಿ ಕೇಂದ್ರ, ಕೆ.ಎಚ್.ಬಿ ಕಾಲೋನಿ, ಪದ್ಮನಯನ ನಗರ, ಅಂಡಮುರನಾಳ, ಚಿಕ್ಕಶಿರಗುಪ್ಪಿ ಆರ್.ಸಿ, ನೀರಲಕೇರಿ ಮತ್ತು ಬೇವಿನಮಟ್ಟಿ ಗ್ರಾಮಗಳ ಸಾವಿರಾರೂ ವಾಹನಗಳ ಸವಾರರೂ ದಿನಂಪ್ರತಿ ಈ ರಸ್ತೆ ಮೂಲಕ ನಗರ ಪ್ರದೇಶದಿಂದ ವಿವಿಧ ಗ್ರಾಮೀಣ ಪ್ರದೇಶಗಳಿಗೆ ಹೋಗುತ್ತಾರೆ. ಅದು



ಅಲ್ಲದೇ ಈ ಭಾಗದಲ್ಲಿ ಹಲವು ಲೇಔಟ್‌ಗಳ ನಿರ್ಮಾಣವಾಗುತ್ತಿದೆ. ಅದೇ ರೀತಿ ಪ್ರತಿದಿನ ರೈತರು ಮಹಿಳೆಯರು ತಮ್ಮ ಹೊಲಗಳಿಗೆ ಬೆಳಿಗ್ಗೆ ಮತ್ತು ರಾತ್ರಿ ಈ ರಸ್ತೆ ಮೂಲಕವೇ ಕಾಲ್ನಡಿಗೆಯಲ್ಲಿ ಸಂಚರಿಸುತ್ತಾರೆ. ಸುಮಾರು 4 ಕಿಮೀ ವರೆಗೆ ಯಾವುದೇ ವಿದ್ಯುತ್ ದೀಪಗಳು ಇಲ್ಲದೇ ಕತ್ತಲಲ್ಲೇ ವಿಷ ಜಂತುಗಳು ಹಾಗೂ ಕುಡುಕರ ಹಾವಳಿಯಿಂದ ಭಯದಿಂದಲೇ ಸಾಗುತ್ತಿದ್ದಾರೆ. ನಗರದಿಂದ ಬೆಳಗಿನ ಜಾವ ವಾಕಿಂಗ್ ಜಾಗಿಂಗ್ ಮಾಡಲು ನೂರಾರೂ ಮಂದಿ ರೋಡಿಗಿಳಿಯುತ್ತಾರೆ. ಇವರೆಲ್ಲರೂ ತಮ್ಮ ಜೀವವನ್ನು ಕೈಯಲ್ಲಿ ಹಿಡಿದುಕೊಂಡೆ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಈ ರಸ್ತೆ ಮೇಲಿರುವ ಯಮನಂತಹ ಗುಂಡಿಗಳನ್ನು ತಪ್ಪಿಸಲು ಹೋಗಿ ಹಲವಾರು ಬಾರಿ ಅಪಘಾತಗಳು ಸಂಭವಿಸಿ ದ್ವಿಚಕ್ರ ವಾಹನಗಳ ಸವಾರರು ತಮ್ಮ ಕೈ ಕಾಲುಗಳನ್ನು ಕಳೆದುಕೊಂಡಿದ್ದಾರೆ.

ಇದರ ಬಗ್ಗೆ ಪತ್ರಿಕೆಗಳಲ್ಲಿ ನಿರಂತರ ಸುದ್ದಿಗಳು ಬಂದರೂ ಸಹ ಅಧಿಕಾರಿಗಳು ಎಚ್ಚೆತ್ತುಕೊಳ್ಳದೇ ದಿವ್ಯ ನಿರ್ಲಕ್ಷ್ಯ ತೋರುತ್ತಿದ್ದು ಇದುವರೆಗೂ ಈ ರಸ್ತೆಯ ನಿರ್ವಹಣೆ ಸಹ ಮಾಡಿರುವುದಿಲ್ಲ. ಹಾಗಾಗಿ ಈ ರಸ್ತೆಯ ಕಾಮಗಾರಿಯ ಬಗ್ಗೆ ಈಗಾಗಲೇ ಟೆಂಡರ್ ಆಗಿರುತ್ತದೆ. ಆದರೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳುಕಾಮಗಾರಿಯನ್ನುಪ್ರಾರಂಭಿಸಲು ಕುಂಟುನೆಪ ಹೇಳಿಕೊಂಡು ವಿನಾಃಕಾರಣ ನಿರ್ಲಕ್ಷ್ಯ ಮಾಡುತಿದ್ದಾರೆ. ಹಾಗಾಗಿ ತಕ್ಷಣವೇ ಬಾಗಲಕೋಟೆನಗರದಿಂದಶಿಗಿಕೇರಿಕ್ರಾಸ್‌ಮತ್ತು ನೀರಲಕೇರಿರೈಲ್ವೇಗೇಟ್‌ವರೆಗೆರಸ್ತೆಅಗಲೀಕರಣ ಜೊತೆಗೆ ಡಿವೈಡರ್, ಪಾದಚಾರಿಗಳಿಗೆ ಫುಟ್‌ಪಾತ್ ವ್ಯವಸ್ಥೆ ಮತ್ತು ಅತಿ ಮುಖ್ಯವಾಗಿ ವಿದ್ಯುತ್ ದೀಪಗಳನ್ನು ಅಳವಡಿಸಿ ಈ ರಸ್ತೆ ಕಾಮಗಾರಿಯನ್ನು ಅತಿ ತುರ್ತಾಗಿ ಪ್ರಾರಂಭ ಮಾಡಬೇಕೆಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಆದೇಶಿಸಿ ಈ ಭಾಗದ ರೈತರು, ಮಹಿಳೆಯರು, ಕಾರ್ಮಿಕರು ಹಾಗೂ ಸಾವಿರಾರೂ ವಾಹನಗಳ ಸವಾರರ ನೆಮ್ಮದಿಗೆ ತಾವುಗಳು ಕಾರಣರಾಗಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಶಿಗಿಕೇರಿ ಗ್ರಾಮ ಪಂಚಾಯಿತಿ ಸದಸ್ಯ ಸಿಂಧೂರ (ಲಕ್ಷ್ಮಣ) ಕಟ್ಟಿಮನಿ, ಮುಖಂಡರಾದ ಪರಶುರಾಮ ಗಡದಿನ್ನಿ, ಅಶೋಕ ಪಾತ್ರೋಟಿ, ಸುರೇಶ ಲಮಾಣಿ, ಪ್ರಕಾಶ ಚವ್ಹಾಣ, ಶಿವಪ್ಪ ಭಾವಿ ಸೇರಿದಂತೆ ಮತ್ತಿತ್ತರರು ಉಪಸ್ಥಿತರಿದ್ದರು.

# ಗುಂಡಕನಾಳ ಶ್ರೀಗಳ ನಿಸ್ವಾರ್ಥ ಸೇವೆ ಅನನ್ಯವಾಗಿದೆ: ವೀರಘೋಟಶ್ರೀ

**ತಾಳಿಕೋಟೆ:** ಧರ್ಮಅನ್ನುವದುಎಲ್ಲರಿಗೂಸರಿ ಸಮಾನವಾಗಿರುತ್ತದೆ ಆ ಧರ್ಮದ ಹಾದಿಯಲ್ಲಿ ಎಲ್ಲರು ಸಾಗಬೇಕಿದೆ ಈ ಭಾಗದಲ್ಲಿ ಧಾರ್ಮಿಕ ಕಾರ್ಯಗಳ ಜೊತೆಗೆ ಧರ್ಮದ ಕಾರ್ಯಕ್ಕೆ ಗುಂಡಕನಾಳ ಹಿರೇಮಠದ ಶ್ರೀ ಗುರುಲಿಂಗ ಶಿವಾಚಾರ್ಯರು ತೊಡಗಿಕೊಂಡು ಸಾಗಿರುವದು ಭಕ್ತರ ಪ್ರೀತಿಯ ಭಕ್ತಿಯೇ ಕಾರಣವಾಗಿದೆ ಎಂದು ವೀರಘೋಟದ ಪರಮಪೂಜ್ಯ ಅಡವಿ ಲಿಂಗ ಮಹಾರಾಜರು ನುಡಿದರು.

ತಾಲೂಕಿನ ಸುಕ್ಷೇತ್ರ ಗುಂಡಕನಾಳ ಗ್ರಾಮದ ಕಾಳೇಬೆಳಗುಂದಿ ಕಟ್ಟಿಮನಿ ಕರಡಕಲ್ ಬಿಲ್ಲಮರಾಜನ ಗುರುಗಳ ಶ್ರೀ ಮಠದಲ್ಲಿ ಲಿಂಗೈಕ್ಯ ಗುರುಗಳ ಪುಣ್ಯಾರಾಧನೆ ಹಾಗೂ ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಪಟ್ಟಾದೀಕಾರ ಮಹೋತ್ಸವದ ಅಂಗವಾಗಿ ಏರ್ಪಡಿಸಲಾದ ಜೀವನ ದರ್ಶನ ಪ್ರವಚನದಲ್ಲಿ ದಿವ್ಯ ಸಾನಿದ್ಯ ವಹಿಸಿ ಶ್ರೀ ಶಶಿಧರ ಸ್ವಾಮಿ ಹಿರೇಮಠ ಹಾಗೂ ಶ್ರೀ ಮಠದ ಶಿಷ್ಯರು ಹಾಗೂ ಸಭಕ್ತರಿಂದ ಗೌರವ ಸನ್ಮಾನ ಸ್ವಿಕರಿಸಿ ಮಾತನಾಡುತ್ತಿದ್ದ ಅವರು ಮನುಷ್ಯನಲ್ಲಿ ಸಹಕಾರ ಮನೋಭಾವನೆ ಎಂಬುದು ಮುಖ್ಯವಾಗಿಬರಬೇಕಾಗಿದೆಎಲ್ಲರಜೊತೆಗೂಡಿ ಬಧುಕಿನ ಬಂಡಿಯನ್ನು ಎಳೆಯುವಂತಹ ಕಾರ್ಯ ಮಾಡಬೇಕು ಮರ–ಗಿಡಗಳು ತನಗಾಗಿ ಬಧುಕದೇ ಎಲ್ಲರಿಗಾಗಿ ಹೇಗೆ ಬಧುಕು ಸಾಗಿಸುತ್ತವೆಯೋ ಹಾಗೆ ಆಸೆ ಆಮಿಷಗಳನ್ನು ದೂರಿಕರಿಸಿ ಬಾಳುವಂತಹ ಕಾರ್ಯ ಎಲ್ಲರೂ ಮಾಬೇಕಿದೆ ನಿಸ್ವಾರ್ಥ ಭಾವನೆ ಎಂಬುದು ಮನುಷ್ಯನಲ್ಲಿರುವ ಕಲ್ಮಷವನ್ನು ತೊಳೆದು ಹಾಕುತ್ತದೆ ಸ್ವಾರ್ಥ ಭಾವನೆ ಎಂಬುದು ಅವರನ್ನೇ ಸುಟ್ಟು ಹಾಕುತ್ತದೆ ಅಂತಹ ಸ್ವಾರ್ಥ ಭಾವನೆಯನ್ನು ಬಿಟ್ಟು ನಿಸ್ವಾರ್ಥಭಾವನೆಯತ್ತ ಎಲ್ಲರೂ ಸಾಗಬೇಕು ಗಿಡ, ಮರಗಳು ಅಲ್ಲದೇ ಹಕ್ಕಿ ಪಕ್ಷಿಗಳು ಹೇಗೆ ಪರೋಪಕಾರಿಯಾಗಿ ಬಧುಕುತ್ತವೆ ಅದರ ದಾರಿಯಲ್ಲಿ




ಸಾಗಬೇಕು ಮನುಷ್ಯನಲ್ಲಿರುವ ಸ್ವಾರ್ಥ ಭಾವನೆ ಸುಟ್ಟು ಹಾಕಲಿಕ್ಕೆ ಜೀವನ ದರ್ಶನ ಪ್ರವಚನವನ್ನು ಗುಂಡಕನಾಳಶ್ರೀಮಠದಲ್ಲಿ ಆಯೋಜಿಸಲಾಗಿದ್ದು ಈ ಪ್ರವಚನ ಅರ್ಥವನ್ನು ಎಲ್ಲರೂ ಅರ್ಥೈಸಿಕೊಂಡು ಸಾಗಬೇಕೆಂದ ಶ್ರೀಗಳು ಗುಂಡಕನಾಳ ಮಠದ ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಅನೇಕ ಸಾಮಾಜಿಕ ಧಾರ್ಮಿಕ ಕಾರ್ಯಕ್ರಮ ಮಾಡಿ ಭಕ್ತರ ಮೂಢನಂಬಿಕೆಗಳನ್ನು ಹೋಗಲಾಡಿಸಿ ಜಾತಿ ಮತ ಪಂಥವನ್ನದೇ ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗುವಂತಹ ಮನೋಭಾವನೆ ಹೊಂದಿದ ಪೂಜ್ಯರು ಎಲ್ಲಾ ಭಕ್ತರನ್ನ ಪ್ರೀತಿಯಿಂದ ಕಾಣುವಂತ ಪೂಜ್ಯರು ಈ ಭಾಗದಲ್ಲಿ ಧಾರ್ಮಿಕ ಕ್ಷೇತ್ರದ ಸಾಮಾಜಿಕ ಕ್ಷೇತ್ರದಲ್ಲಿ ತಮ್ಮದೇ ಆದಂತಹ ಅನನ್ಯವಾದ ಸೇವನೆ ಸಲ್ಲಿಸುತ್ತಾ ಬಂದಿರುವುದು ಶ್ಲಾಘನೀಯವಾಗಿದೆ ಅಂತಹ ಪೂಜ್ಯರನ್ನು ಪಡೆದ ಈ ಭಾಗದ ಭಕ್ತ ಸಮೂಹ ದನ್ಯರೆಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗುಂಡಕನಾಳ ಬ್ರಹನ್ಮಠದ ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಸಮಾಜ ನಮಗೇನು ಕೊಟ್ಟಿದೆ ಅನ್ನೋದಕ್ಕಿಂತ ಸಮಾಜಕ್ಕೆ ಮತ್ತು ಧರ್ಮಕ್ಕೆ ನಾವು ಏನು ಕೊಡುಗೆ ಕೊಟ್ಟಿದ್ದೇವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಮತ್ತು ಮನುಷ್ಯ ಪರೋಪಕಾರಿಯಾಗಿ ಬದುಕಬೇಕು ಸಹಕಾರ ಮತ್ತು ಸಹಬಾಳ್ವೆಯಿಂದ ಇದ್ದರೆ ಮನುಷ್ಯನ ಮನಸ್ಸು ನಂದನವಾಗಿರುತ್ತದೆ ಹಾಗೆ ಎಲ್ಲರೂ ಕೂಡ ಮನಸ್ಸನ್ನು ನಂದನವನವನ್ನಾಗಿ ಮಾಡಿಕೊಳ್ಳಬೇಕು ಎಲ್ಲ ಕಾರ್ಯಗಳಲ್ಲಿಯೂ ಇಂದು ಸ್ವಾರ್ಥವೆಂಬುದು ತಾಂಡವ ಆಡುತ್ತಿದೆ ಆದರೆ ಧರ್ಮದ ಕಾರ್ಯದಲ್ಲಿ ಯಾರೂ ಸ್ವಾರ್ಥವನ್ನು ಬಯಸದೇ ಕೆಲಸ ಮಾಡಬೇಕು ಇದರಿಂದ ಮಾನವ ಜನ್ಮ ತಿದ್ದಲು ಸಾದ್ಯವಾಗಲಿದೆ ಎಂದ ಅವರು ಭಕ್ತರ ಪ್ರೀತಿ ವಿಸ್ವಾಸದಿಂದ ಗುಂಡಕನಾಳಮಠವು ಧಾರ್ಮಿಕ ಕಾರ್ಯಗಳ ಜೊತೆಗೆ ಧರ್ಮದಲ್ಲಿ ಕಾರ್ಯದಲ್ಲಿ ತೊಡಗಿಕೊಳ್ಳಲು ಸಾದ್ಯವಾಗಿದೆ ಎಂದರು.

ಪುರಾಣ ಪ್ರವಚನಕಾರರಾದ ವೇದಮೂರ್ತಿ ದೊಡ್ಡಬಸಯ್ಯ ಶಾಸ್ತ್ರಿಗಳು ಮಾತನಾಡಿ ನಂಬಿಕೆ ಮತ್ತು ಶ್ರದ್ಧೆ ಮುಖ್ಯ ಎನ್ನುವ ವಿಷಯವನ್ನು ತೆಗೆದುಕೊಂಡು ಗೊಲ್ಲಾಳೇಶ್ವರ ಚರಿತ್ರೆಯನ್ನು ಶ್ರೀಶೈಲ ಮಲ್ಲಯ್ಯನ ಹಾಗೂ ಹೇಮರೆಡ್ಡಿ ಮಲ್ಲಮ್ಮ ತಾಯಿಯ ಭಕ್ತಿಯ ಕಾರ್ಯದ ಕುರಿತು ವಿವರಿಸಿದರು.

ಗುರುಪ್ರಕಾಶ್ ಹಿರೇಮಠ ಸ್ವಾಗತಿಸಿ ನಿರೂಪಿಸಿದರು. ಕಾರ್ಯಕ್ರಮದ ನಂತರ ಸಮಸ್ತಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಯಿತು.

## ಹನಗಂಡಿ ಗ್ರಾಮ ಪಂಚಾಯತಿಗೆ ಜಿಪಂ ಸಿಇಒ ಭೇಟಿ



**ತೇರದಾಳ :** ಹನಗಂಡಿ ಗ್ರಾಮ ಪಂಚಾಯತಿಗೆ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ನೇತೃತ್ವದ ಅಧಿಕಾರಿಗಳು ಅನಿರೀಕ್ಷಿತವಾಗಿ ಭೇಟಿ ನೀಡಿ ಗ್ರಾಮ ಪಂಚಾಯತ್ ವತಿಯಿಂದ ಕೈಗೊಂಡಿರುವ ಕಾಮಗಾರಿಗಳನ್ನು ಪರಿಶೀಲಿಸಿದರು.

ಈ ವೇಳೆ ಜಾನುವಾರುಗಳಿಗೆ ಶೆಡ್ ನಿರ್ಮಿಸಿಕೊಂಡಿರುವ ಸುಮಾರು ಮೂವತ್ತು ಜನ ಫಲಾನುಭವಿಗಳ ಹಣ ಇನ್ನೂ ಪಾವತಿಯಾಗಿಲ್ಲ. ಕಳೆದ ಐದಾರು ತಿಂಗಳಿಂದ ಈ ಕುರಿತು ಹೇಳಿ ಕೇಳಿ ಸಾಕಾಗಿದೆ. ಇದರಿಂದ ಗ್ರಾಮಸ್ಥರ ಮುಂದೆ ಸದಸ್ಯರು ಅವಮಾನ ಗೊಳ್ಳುವಂತಾಗುತ್ತಿದೆ ಎಂದು ಸದಸ್ಯರಾದ ಧರೇಶ ಹುದ್ದಾರ, ಪ್ರಕಾಶ ನಾರವ್ವಗೋಳ, ಕುಮಾರ ಮಾಂಗ, ಅನಿಲ ಗುಬಚಿ, ಕರೆಪ್ಪ ದಳವಾಯಿ ಸಿಇಒ ಶಶಿಧರ ಕುರೇರ ಎದುರು ತಮ್ಮ ಸಮಸ್ಯೆ ತೋಡಿಕೊಂಡರು. ನೀವು ಹೇಳಿದಾಗೆಲ್ಲ ಬಿಲ್ ಪಾವತಿಸಲು ಸಾಧ್ಯ ಇಲ್ಲ. ದನಗಳ ಶೆಡ್ಗೆ ಅನುದಾನ ನೀಡಲು ಅವಕಾಶ ಇಲ್ಲ ಎಂದು ಹೇಳಿದರು. ನಿಯಮ ಇದ್ದಿದ್ದರಿಂದಲೇ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ ಹಾಗೂ ಅನುಮೋದನೆ ಪಡೆಯಲಾಗಿದೆ. ಶೆಡ್ ನಿರ್ಮಿಸಿಕೊಂಡ ಬಳಿಕ ಈ ರೀತಿ ಮಾತನಾಡಿದರೆ ಹೇಗೆ ? ನೀವು ಹೇಳುವುದನ್ನು ಲಿಖಿತವಾಗಿ ಬರೆದುಕೊಡಿ. ಅದನ್ನು ಗ್ರಾಮಸ್ಥರ ಮುಂದೆ ಇಡುತ್ತೇವೆ. ಸುಮ್ಮನೆ ನಮ್ಮ ಹೆಸರನ್ನು ಹಾಳು ಮಾಡಬೇಡಿ ಎಂದು ವಾದಿಸಿದರು. ಈ ವೇಳೆ ಅಧಿಕಾರಿಗಳು ಹಾಗೂ ಸದಸ್ಯರ ನಡುವೆ ಇರಿಸು ಮುರಿಸು ಉಂಟಾಯಿತು. ಮೇಲಾಧಿಕಾರಿಗಳೇ ಸಮಸ್ಯೆಗೆ ಸ್ಪಂಧಿಸದಿದ್ದರೆ ಕೆಳಮಟ್ಟದ ಅಧಿಕಾರಿಗಳು ಹೇಗೆ ಸ್ಪಂಧಿಸುತ್ತಾರೆ. ಸಿಇಒ ಅವರು ಗ್ರಾಮಸ್ಥರ ಸಮಸ್ಯೆಗಳನ್ನು ಅರಿಯಬೇಕು. ಕೆಲಸ ಮಾಡಿದ ಮೇಲೆ ಹಣ ಪಾವತಿಸುವುದಿಲ್ಲ ಎಂದರೆ ಹೇಗೆ. ಕೂಡಲೇ ದನಗಳ ಶೆಡ್ ನಿರ್ಮಾಣಗೊಂಡಿರುವ ಫಲಾನುಭವಿಗಳ ಹಣ ಪಾವತಿಸಬೇಕು. ಇಲ್ಲದಿದ್ದರೆ ಸರಕಾರಕ್ಕೆ ತಮಗಾದ ತೊಂದರೆ ಕುರಿತು ಪತ್ರ ಬರೆಯಲಾಗುವುದು. ಹಾಗೂ ಫಲಾನುಭವಿಗಳ ಜತೆಗೆ ಧರಣಿ ನಡೆಸಲಾಗುವುದು ಎಂದು ಅನಿಲ ಗುಬಚಿ, ಧರೇಶ ಹುದ್ದಾರ, ಕರೆಪ್ಪ ದಳವಾಯಿ, ಪ್ರಕಾಶ ನಾರವ್ವಗೋಳ ಕುಮಾರ ಮಾಂಗ ಎಚ್ಚರಿಕೆ ನೀಡಿದರು.

## ಬಸವಾದಿ ಶರಣರ ಆಚರಣೆ ಇಂಚಗೇರಿಯಿಂದ ಸಾಧ್ಯವಾಗಿದೆ

**ರಬಕವಿ-ಬನಹಟ್ಟಿ, :** 12ನೇ ಶತಮಾನದ ಬಸವಾದಿ ಶರಣರ ಆಚರಣೆಗಳು ಇಂದಿಗೂ ಜೀವಂತವಾಗಿ ಮುನ್ನಡೆಯಲು ಇಂಚಗೇರಿ ಸಂಪ್ರದಾಯದ ಅದರಲ್ಲೂ ಮಾಧವಾನಂದರ ಕೊಡುಗೆ ಅಮೂಲ್ಯವಾದುದು ಎಂದು ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳು ಹೇಳಿದರು.



ರಬಕವಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗು ಇಂಚಗೇರಿ ಸಂಪ್ರದಾಯದ ರಾಚೋಟೇಶ್ವರ ಮಹಾರಾಜರ ಹಾಗು ಕಾಶವ್ವತಾಯಿ ಹೂಗಾರರ 98ನೇ ಸಪ್ತಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಆಧ್ಯಾತ್ಮಿಕ, ಸಮಾಜದ ಪ್ರಗತಿಗೆ ಇಂಚಗೇರಿ ಸಂಪ್ರದಾಯ ಉತ್ಕೃಷ್ಟ. ಕೃಷ್ಣಾ ತೀರದಲ್ಲಿ ಸತ್ಸಂಗ ಹಾಗು ಶಿವಾನುಭವದ ಸಿರಿವಂತಿಕೆ ಮೆಚ್ಚುವಂಥದ್ದು ಎಂದರು.

ಹಿರಿಯ ಸಾಹಿತಿ ಸಿದ್ಧರಾಜ ಪೂಜಾರಿ ಮಾತನಾಡಿ, 13ನೇ ಶತಮಾನದಿಂದಲೇ ಇಂಚಗೇರಿ ಸಂಪ್ರದಾಯದ ಮೂಲಕ ಸರ್ವ-ಧರ್ಮ ಸಮಾನತೆಯೊಂದಿಗೆ ಮಹಿಳೆಗೆ ಪ್ರಾಧಾನ್ಯತೆ ನೀಡುವಲ್ಲಿ ಕಾರಣವಾಗಿದೆ. ಇವೆಲ್ಲದಕ್ಕೂ ಕಾಡಸಿದ್ಧೇಶ್ವರರ ಕೃಪೆ ಅಮೂಲ್ಯವಾಗಿದ್ದು, ಅಂದಿನಿಂದ 50ನೇಯವರಾಗಿ ಮುಪ್ಪಿನ ಕಾಡಸಿದ್ಧೇಶ್ವರರಾಗಿ ಮುನ್ನಡೆಯುತ್ತಿರುವ ಇಂದಿಗೂ ಜೀವಂತವೆಂದರು.

ಕಟ್ಟಡೆಯ ಪಾಪಿಯೂ ಉದ್ದಾರವಾಗುವ ಉದ್ದೇಶ ಇಂಚಗೇರಿಯದ್ದು, ಆಧ್ಯಾತ್ಮದ ಅರಿವಿಗೆ ದಾಸಬೋಧ ಅಮೂಲ್ಯವಾಗಿದೆ ಎಂದರು.

ಎಂ.ಎಸ್. ಬದಾಮಿ ಮಾತನಾಡಿ, ಧರ್ಮ, ಅರ್ಥ, ಕಾಮ, ಮೋಕ್ಷ ಇವೆಲ್ಲವನ್ನು ಗೆದ್ದವನೇ ಜ್ಞಾನಿ ಆತ್ಮದ ವೈಭವ ಅನುಭವಿಸುವವನೇ ಜ್ಞಾನಿ ಇದನ್ನು ವಿಜಯಪುರ ಜ್ಞಾನ ಯೋಗಾಶ್ರಮದ ಸಿದ್ಧೇಶ್ವರ ಸ್ವಾಮೀಜಿಗಳು ಅನುಭವಿಸಿ ಹೋಗಿದ್ದಾರೆಂದು ಮಾರ್ಮಿಕವಾಗಿ ನುಡಿದರು. ಗುರುವಿನ ಸ್ಮರಣೆಯೊಂದಿಗೆ ಉಪದೇಶ ಪಾಲಿಸುವದು ಅಮೂಲ್ಯ. ಎಲ್ಲ ಶಾಸ್ತ್ರ, ಧರ್ಮ ಮೀರಿ ಬೆಳೆಯುವಲ್ಲಿ ಇಂಚಗೇರಿ ಸಂಪ್ರದಾಯ ಮಹತ್ವ ಪಡೆದಿದೆ. ಪ್ರಾಣಕ್ಕೆ ಲಿಂಗ ಕಟ್ಟಿದವರೇ ಇಂಚಗೇರಿ ಸದ್ಭಕ್ತರು.

ದೇವರು ನಮ್ಮ ಆತ್ಮದೊಳಗೇ ಇದ್ದಾನೆಂದು ಬದಾಮಿ ತಿಳಿಸಿದರು.

ಸಾಹಿತಿ ಮಲ್ಲಿಕಾರ್ಜುನ ಹುಲಗಬಾಳಿ, ಭಸ್ಮೆ ಮಹಾರಾಜರು, ನಿವೃತ್ತ ಡಿಡಿಪಿಯು ಶಶಿಧರ ಪೂಜಾರಿ, ವಿರುಪಾಕ್ಷ ಮಹಾರಾಜರು, ಹಣಮಂತ ಮಹಾರಾಜರು, ಗುರುದೇವ ಹೂಗಾರ, ಬಾಲಚಂದ್ರ ಗುರುವ, ಎಸ್. ಎಂ. ದಾಶಾಳ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅರವಿಂದ ಮಗದುಮ್ ಮಹಾರಾಜರು ದಾಸಬೋಧ ಪಠಣ ಮಾಡಿದರು.

## ಆತಂಕ ಮೂಡಿಸಿದ ಮುಂಜಾನೆಯ ಮಂಜು

**ಇಲಾಹಿ ಇ. ಜಮಖಂಡಿ.**



**ಚಿಮ್ಮಡ :** ಈ ಭಾಗದಲ್ಲಿ ಕಳೆದ ಎರಡು ದಿನಗಳಿಂದ ಕವಿಯುತ್ತಿರುವ ಮುಂಜಾನೆಯ ಮಂಜಿನಿಂದಾಗಿ ರೈತರು ವಾಯೂ ವಿಹಾರಿಗಳು ಹಾಗೂ ವಾಹನ ಸವಾರರಲ್ಲಿ ತೀವ್ರ ಆತಂಕ ಮೂಡಿಸಿತ್ತು.

ಬುಧವಾರ ಹಾಗೂ ಗುರುವಾರ ಅತಿ ಹೆಚ್ಚು ಮಂಜು ಕವಿದ ಕಾರಣ ಇಲ್ಲಿನ ಮಹಾಲಿಂಗಪೂರ ರಬಕವಿ ರಾಜ್ಯ ಹೆದ್ದಾರಿಯಲ್ಲಿ ಹತ್ತು ಅಡಿ ದೂರದ ವಾಹನ ಹಾಗೂ ಪಾದಚಾರಿಗಳು ಕಾಣದಾಗಿದ್ದರು. ಪ್ರತಿಯೊಂದು ವಾಹನಗಳು ದೀಪ (ಹೆಡಲೈಟ್) ಹಾಗೂ ಹಾರ್ನ ಶಬ್ದದ ಸಹಾಯದಿಂದಲೇ ಚಲಾಯಿಸುವಂತಾಗಿತ್ತು, ವಾಯೂ ವಿಹಾರಿಗಳು ರಸ್ತೆಯಿಂದ ಕೆಳಗಿರುವ ಪಾದಚಾರಿ ಮಾರ್ಗ ಮಾತ್ರ ಬಳಸುತಿದ್ದರು. ಪ್ರತಿಯೊಂದು ವಾಹನಗಳ ವೇಗದ ಮಿತಿ ಬರೀ ಇಪ್ಪತ್ತು ಕಿ.ಮಿ ಮಾತ್ರ ಇತ್ತು ವೇಗ ಹೆಚ್ಚಿಸಿದರೆ ಅಪಘಾತ ಗ್ಯಾರಂಟಿ ಎನ್ನುವಷ್ಟು ದಟ್ಟದಾಗಿ ಮೋಡ ಕವಿದದ್ದು ಬೈಕ್ ಸವಾರರಿಗೆ ಆತಂಕ ಮೂಡಿಸಿತ್ತು ಏಕೆಂದರೆ ಈಹಿಂದೆ ಮಂಜು ಕವಿದ ಪರಿಣಾಮವೇ ಬೈಕ ಸವಾರ ಅಪಘಾತವಾದ ಪರಿಣಾಮ ಸ್ಥಳದಲ್ಲಿಯೇ ಚಾಲಕ ಮೃತಪಟ್ಟಿದ್ದು ಮತ್ತಷ್ಟು ಆತಂಕ ಮೂಡಿಸಿತ್ತು. ಮುಂಜಾನೆ 10 ಘಂಟೆಯಾದರೂ ಮಂಜು ಕರಗದೆ ಸೂರ್ಯನನ್ನೆ ಮರೆಯಾಗಿಸಿ ಬಿಸಿಲು ಭೂವಿಗೆ ಬಾರದಂತೆ ತಡೆಹಿಡಿದ ಪರಿಣಾಮ ಈ ವಾಹನ ಸವಾರರು ಮಾತ್ರವಲ್ಲದೆ ರೈತರೂ ಕೂಡ ಆತಂಕವ್ಯಕ್ತಪಡಿಸಿದ್ದಾರೆ.

ತರಕಾರಿ ಬೆಳೆಗೆ ಈ ಮಂಜು ಮಾರಕವಾಗಿದ್ದು ಮಂಜಿನಿಂದಾಗಿ ತರಕಾರಿ ಹೂವು ಬಿಡುವಾಗಲೇ ಉದುರುವುದರಿಂದ ಬೆಳೆಗಳ ಇಳುವರಿ ಕುಂಠಿತಗೊಳ್ಳುವುದಲ್ಲದೇ ಕಟಾವಿಗೆ ಬಂದ ಗೋದಿ, ಸದಕ, ಮಾವು ಸೇರಿದಂತೆ ಹೂ ಬಿಡುವ ಪ್ರತಿಯೊಂದು ತರಕಾರಿ, ಹಣ್ಣು ಬೆಳೆ ಕೂಡ ಕಪ್ಪಾಗಿ ಕೊಳೆಯುವುದು, ಇದಕ್ಕೆ ಕೂಡಲೆ ಬೆಳೆಗೆ ನೀರು ಹೊಡೆಯಬೇಕೂ ಇಲ್ಲವೇ ಬೆಳೆ ಕಟಾವು ಮಾಡಿ ರಾಶಿ ಮಾಡದಿದ್ದಲ್ಲಿ ರೈತರಿಗೆ ಅಪಾರ ಪ್ರಮಾಣದಲ್ಲಿ ಹಾಣಿಯಾಗಲಿದೆ ಎಂದು ಪ್ರಗತಿಪರ ರೈತ ಮಹಾಂತೇಶ ಜಾಲಿಕಟ್ಟಿ ಆತಂಕ ವ್ಯಕ್ತಪಡಿಸಿದರು.

ಮೊದಲೇ ತರಕಾರಿಯ ಬೆಲೆ ಗಗನಕ್ಕೇರಿದ್ದು ಇನ್ನು ಈ ಮಂಜಿನ ದಾಳಿಯಿಂದ ಮತ್ತಷ್ಟು ಬೆಲೆ ಹೆಚ್ಚುವ ಆತಂಕ ಶ್ರೀ ಸಾಮಾನ್ಯರಿಗೆ ಕಾಡುತ್ತಿದೆ.

## ಮಕ್ಕಳಲ್ಲಿ ಉತ್ತಮ ಸಂಸ್ಕಾರ ಅಗತ್ಯ: ಸಿದ್ದಪ್ಪ ಪಟ್ಟಿಹಾಳ

**ಚಿಮ್ಮಡ :** ಇಂದಿನ ಆಧುನಿಕ ಯುಗದಲ್ಲಿ ಮಕ್ಕಳು ಒಳ್ಳೆಯ ಸಂಸ್ಕಾರ, ಮೌಲ್ಯಗಳು, ಕಾಯಕ ನಿಷ್ಠೆ, ಆರೋಗ್ಯವಂತ ಶರೀರ ಹಾಗೂ ದೃಢ ಮನಸ್ಸನ್ನು ಹೊಂದಿರಬೇಕಾದ ಅಗತ್ಯವಿದೆ ಎಂದು ರಬಕವಿ-ಬನಹಟ್ಟಿ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಸಿದ್ದಪ್ಪ ಪಟ್ಟಿಹಾಳ ಹೇಳಿದರು.




ಸಮೀಪದ ಯರಗಟ್ಟಿ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ (ಆರ್.ಎಮ್.ಎಸ್.ಎ.) ಆವರಣದಲ್ಲಿ 2024-25 ನೇ ಸಾಲಿನ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ದೀಪದಾನ ಸಮಾರಂಭದ ಉದ್ಘಾಟಣೆ ನೆರವೇರಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳು ಓದಲು ವೇಳಾಪತ್ರಿಕೆ ಹಾಕಿಕೊಂಡು ಶಿಸ್ತು ಬದ್ಧವಾಗಿ ಅಧ್ಯಯನ ಮಾಡಬೇಕು, ಮಕ್ಕಳಿಗೆ ಆಕರ್ಷಿತ ಹಾಗೂ ಪರಿಣಾಮಕಾರಿಯಾದ ಬೋಧನೋಪಕರಣಗಳನ್ನು ಬಳಸಿಕೊಂಡು ಪಾಠ ಮಾಡಲು ಈ ಪ್ರೌಢ ಶಾಲೆಗೆ ತಾಲೂಕ ಪಂಚಾಯತ ವತಿಯಿಂದ ಸ್ಮಾರ್ಟ್‌ಕ್ಲಾಸ್ ಹಾಗೂ ಪೀಠೋಪಕರಣಗಳನ್ನು ಪೋರೈಸಲಾಗಿದ್ದು, ಇನ್ನೂ ಹೆಚ್ಚಿನ ಬೋಧನಾ-ಕಲಿಕಾ ಪ್ರಕ್ರಿಯೆಗೆ ಸಂಬಂಧಿಸಿದ ಪರಿಕರಗಳ ಅಗತ್ಯವಿದ್ದಲ್ಲಿ ತಮ್ಮ ಗಮನಕ್ಕೆ ತಂದರೆ ಅವುಗಳನ್ನು ಪ್ರಥಮ ಆದ್ಯತೆಯ ಮೇರೆಗೆ ಪೂರೈಸಲು ಪ್ರಯತ್ನಿಸುವುದಾಗಿ ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ತೇರದಾಳ ಪುರಸಭೆಯ ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ ಮಾತನಾಡಿ ವಿದ್ಯಾಭ್ಯಾಸದಲ್ಲಿ ಏಕತೆ ಬರಬೇಕಾದರೆ ದೈಹಿಕ ಹಾಗೂ ಮಾನಸಿಕ ಆರೋಗ್ಯ ಬಹಳ ಮುಖ್ಯ, ಅದನ್ನು ಕಾಪಾಡಿಕೊಳ್ಳಲು ತಾವೆಲ್ಲರೂ ಬಿಡುವಿನ ಅವಧಿಯಲ್ಲಿ ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತಂದೆ-ತಾಯಿಯರಿಗೆ ನೆರವಾಗಬೇಕು, ಎಸ್.ಎಸ್.ಎಲ್.ಸಿ. ಯಲ್ಲಿ ಒಳ್ಳೆಯ ಅಂಕಗಳನ್ನು ಪಡೆದು ಉನ್ನತ ಶಿಕ್ಷಣ ಪಡೆಯಲು ಒಳ್ಳೆಯ ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು, ಜೀವನದಲ್ಲಿ ಬರುವ ಎಲ್ಲ ಕಷ್ಟಗಳನ್ನು ಮೆಟ್ಟಿ ನಿಂತು ಸಾಧನೆ ಮಾಡಲು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಶಿಕ್ಷಕರಾದ ಶ್ರೀ ಉತ್ತಮಕುಮಾರ ಮಗದುಮ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್.ಡಿ.ಎಮ್.ಸಿ. ಅಧ್ಯಕ್ಷರಾದ ಶ್ರೀಮತಿ ಶಾಂತವ್ವ ಬ.ಕಂಕಣವಾಡಿ ವಹಿಸಿದ್ದರು. ಹನಗಂಡಿ ಗ್ರಾಮ ಪಂಚಾಯತ ಅಧ್ಯಕ್ಷರಾದ ಶ್ರೀಮತಿ ಬಸವ್ವ ಲೋಕಾಪೂರ, ಪ್ರಾಥಮಿಕ ವಿಭಾಗದ ಎಸ್.ಡಿ.ಎಮ್.ಸಿ. ಅಧ್ಯಕ್ಷರಾದ ಶ್ರೀ ಮಹಾದೇವ ಸನದಿ, ಪ್ರೌಢ ಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯ ಶ್ರೀ ಐ.ಡಿ.ನದಾಫ್, ಪ್ರಾಥಮಿಕ ವಿಭಾಗದ ಮುಖ್ಯಗುರುಮಾತೆ ಶ್ರೀಮತಿ ಎಮ್.ಐ.ಚಿತ್ರ ಭಾನುಕೋಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಹ ಶಿಕ್ಷಕರಾದ ಶ್ರೀಮತಿ ಎಸ್.ಹೆಚ್. ರಾಮದುರ್ಗ ಸ್ವಾಗತಿಸಿದರು, ಶ್ರೀ ಎ.ಜಿ.ಮಹಾಲಿಂಗಪೂರ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಎಮ್.ಐ. ಚಿತ್ರಭಾನುಕೋಟಿ, ಶ್ರೀ ಬಿ.ಬಿ.ಲೋಕಾಪೂರ ವಂದಿಸಿದರು. ಕಾರ್ಯಕ್ರಮದಲ್ಲಿ ಎಸ್.ಡಿ.ಎಮ್.ಸಿ.ಯ ಸರ್ವ ಪದಾಧಿಕಾರಿಗಳು, ಗ್ರಾಮ ಪಂಚಾಯತ ಸದಸ್ಯರು ಹಾಗೂ ಪಾಲಕರು ಹಾಜರಿದ್ದರು.

## ಹೆಸ್ಕಾಂ ರೈತರ ಮನವಿಗೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಸ್ಪಂದನೆ: ಇನ್ನೂ 15 ದಿನ ಮಲಪ್ರಭಾ ಜಲಾಶಯದಿಂದ ನೀರು ಬಿಡಲು ಆದೇಶ

**ಬೆಳಗಾವಿ :** (ಸವದತ್ತಿ) ಮಲಪ್ರಭಾ ಜಲಾಶಯದಿಂದ ಕಾಲುವೆಗಳಿಗೆ ಹರಿಬಿಡಲಾಗಿರುವ ನೀರನ್ನು ಫೆಬ್ರವರಿ 15ರಿಂದ ಸ್ಥಗಿತಗೊಳಿಸುವ ನಿರ್ಧಾರವನ್ನು ರೈತರ ಬೇಡಿಕೆಯ ಹಿನ್ನೆಲೆಯಲ್ಲಿ ಕೈಬಿಟ್ಟು ಮಾರ್ಚ್ 1ರ ವರೆಗೂ ನೀರು ಬಿಡುವಂತೆ ಮಲಪ್ರಭಾ ಯೋಜನಾ ನೀರಾವರಿ ಸಲಹಾ ಸಮಿತಿ ಅಧ್ಯಕ್ಷರೂ ಆಗಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಆದೇಶಿಸಿದ್ದಾರೆ.



ಲಕ್ಷ್ಮೀ ಹೆಬ್ಬಾಳ್ಕರ್ ಅವರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 15ರಂದು ಜರುಗಿದ್ದ ಸಭೆಯಲ್ಲಿ ಶಾಸಕರುಗಳು, ಮಹಾಮಂಡಳದ ಅಧ್ಯಕ್ಷರು, ರೈತರು ಮುಖಂಡರೊಂದಿಗೆ ಚರ್ಚಿಸಿ, ಜಲಾಶಯ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಪ್ರಸಕ್ತ 2024-25ನೇ ಸಾಲಿನಲ್ಲಿ ಮುಂಗಾರು ಹಂಗಾಮಿಗಾಗಿ 14.87 ಟಿ.ಎಂ.ಸಿ ಹಾಗೂ ಹಿಂಗಾರು ಹಂಗಾಮಿಗೆ 16 ಟಿ.ಎಂ.ಸಿ ಹೀಗೆ ಒಟ್ಟಾರೆಯಾಗಿ 30.842 ಟಿ.ಎಂ.ಸಿ ನೀರನ್ನು ಮಲಪ್ರಭಾ ಜಲಾಶಯದಿಂದ ನೀರಾವರಿಗಾಗಿ ಒದಗಿಸಲಾಗಿದೆ.

ಅದರಂತೆ ಮಲಪ್ರಭಾ ಜಲಾಶಯದಿಂದ ನೀರಾವರಿಗಾಗಿ ಒಳಪಡುವ ಕಾಲುವೆಗಳ ಮುಖಾಂತರ ಫೆಬ್ರವರಿ 14ರ ವರೆಗೆ 16 ಟಿಎಂಸಿ ನೀರನ್ನು ನೀರಾವರಿ ಉದ್ದೇಶಕ್ಕೆ ರೈತರಿಗೆ ಬಿಡುಗಡೆ ಮಾಡಲಾಗಿದೆ.

ಪ್ರಸ್ತುತ ಎರಡೂ ಹಂಗಾಮುಗಳು ಮುಗಿದಿದ್ದರೂ ಸಹ, ನರಗುಂದ ಹಾಗೂ ಬಾದಾಮಿ ಶಾಸಕರು ಹಾಗೂ ರೈತ ಮುಖಂಡರು ನೀರನ್ನು ಕಾಲುವೆಗಳಿಗೆ ಮಾರ್ಚ 15ರವರೆಗೆ ಮುಂದುವರಿಸುವಂತೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರಲ್ಲಿ ಮನವಿ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ, ರೈತರ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ಫೆಬ್ರವರಿ 15ಕ್ಕೆ ಸ್ಥಗಿತಗೊಳಿಸಬೇಕಾಗಿದ್ದ ನೀರನ್ನು ಮಾರ್ಚ್ 1ರ ವರೆಗೆ ನೀರಾವರಿ ಕಾಲುವೆಗಳ ಮುಖಾಂತರ ಹರಿಸುವುದನ್ನು ಮುಂದುವರೆಸಲಾಗುವುದು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದ್ದಾರೆ.

ಅಲ್ಲದೆ, ಅವಶ್ಯಕ ಕುಡಿಯುವ ನೀರಿಗಾಗಿ ಜೂನ್ ಅಂತ್ಯದವರೆಗೆ 15 ಟಿ.ಎಂ.ಸಿ ನೀರನ್ನು ಕಾಯ್ದಿರಿಸಿ ಒದಗಿಸಲು ಸಚಿವರು ಸೂಚಿಸಿದ್ದಾರೆ. ಜೊತೆಗೆ, ಮಾರ್ಚ 1ರೊಳಗಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸಣ್ಣನೀರಾವರಿ ಇಲಾಖೆಯ ಅಧಿಕಾರಿಗಳು ಕುಡಿಯುವ ನೀರಿಗಾಗಿ ತಮ್ಮ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ತುಂಬಿಸಲು ಕ್ರಮ ಕೈಗೊಳ್ಳಬೇಕು ಎಂದೂ ಸಚಿವರು ಸೂಚಿಸಿದ್ದಾರೆ.

ಪ್ರಸಕ್ತ ಬೇಸಿಗೆಯ ತೀವ್ರತೆ ಜಾಸ್ತಿಯಾಗಿರುವ ಹಿನ್ನೆಲೆಯಲ್ಲಿ ಕುಡಿಯುವ ನೀರಿಗಾಗಿ ಬೇಡಿಕೆ ಹೆಚ್ಚಾಗುವುದರಿಂದ ಹಿತ-ಮಿತವಾಗಿ ನೀರನ್ನು ಬಳಸುವಂತೆ ಮಲಪ್ರಭಾ ಯೋಜನಾ ನೀರಾವರಿ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆಗಿರುವ ನವಿಲುತೀರ್ಥದ ಅಧೀಕ್ಷಕ ಅಭಿಯಂತರ ವಿ.ಎಸ್. ಮಧುಕರ ಮನವಿ ಮಾಡಿದ್ದಾರೆ. ಜೊತೆಗೆ, ಸಹಕರಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸಿದ್ದಾರೆ.

## ಶಾಲಾ ಅಂಗಳದಲ್ಲಿ ಮಕ್ಕಳ ಸಂತೆ



**ಮೂಡಲಗಿ :** ಮಕ್ಕಳ ಪಾಠದ ಜೊತೆಗೆ ಪಠ್ಯೇತರ ಹಾಗೂ ವ್ಯವಹಾರಿಕ ಜ್ಞಾನಕ್ಕೆ ಒತ್ತು ಕೊಡುವುದರಿಂದ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಾಧ್ಯ. ಶಿಕ್ಷಕರು ನಮ್ಮ ಶಾಲೆಯಲ್ಲಿ ಈ ರೀತಿ ವಿಭಿನ್ನ ಕಾರ್ಯಕ್ರಮಗಳನ್ನ ಆಯೋಜಿಸುತ್ತಿರುವುದು ಶ್ಲಾಘನೀಯ ಎಂದು ಎಸ್.ಡಿ.ಎಂ.ಸಿ. ಅಧ್ಯಕ್ಷ ಎಸ್. ಬಿ. ಗೋರಗುದ್ದಿ ಹೇಳಿದರು. ತಾಲೂಕಿನ ಹಳ್ಳೂರ ಗ್ರಾಮದ ತೋಟದ ಸರ್ಕಾರಿ ಕನ್ನಡ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ, ಮಕ್ಕಳಿಗೆ ಸಾಮಾನ್ಯ ಜ್ಞಾನದ ಅರಿವು ಮೂಡಿಸುವ ಸಲುವಾಗಿ "ಸಂತೆ" ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಾಬು ಸಪ್ತಸಾಗರ ಹಾಗೂ ಶಾಲೆಯ ಪ್ರಧಾನ ಗುರು ಬಿ. ಪಿ. ಪಾಟೀಲ ಶಿಕ್ಷಣದೊಂದಿಗೆ ನೈಜ ವ್ಯವಹಾರಿಕ ಜ್ಞಾನ ಬೆಳೆಯಲು ಮಕ್ಕಳ ಸಂತೆ ಕಾರ್ಯಕ್ರಮ ಸಹಕಾರಿಯಾಗಿದೆ. ಇದು ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಕಾರ್ಯಕ್ರಮವಾಗಿದೆ ಎಂದರು.

ಮಕ್ಕಳು ವಿಶೇಷ ಉಡುಗೆತೊಡುಗೆಳೊಂದಿಗೆ ಹೊಲದಲ್ಲಿ ಬೆಳೆದ ವಿವಿಧ ತರಕಾರಿ, ಹಣ್ಣು ಹಂಪಲ, ದಿನಸಿ ಕಾಳುಗಳು, ವಿಶೇಷವಾದ ತಿಂಡಿ ತಿನಿಸುಗಳಾದ ಬೇಲ್ ಪುರಿ, ಬೋಂಡಾ, ಬಜ್ಜಿ, ಕಾಫಿ, ಟೀ ಸೇರಿದಂತೆ ಹಲವು ಅಗತ್ಯ ವಸ್ತುಗಳನ್ನು ಮಾರಾಟ ಮಾಡಲಾಯಿತು. ಮಕ್ಕಳು ಸಾರ್ವಜನಿಕರಿಗೆ ಮಾರುತ್ತಿದ್ದ ವಸ್ತುಗಳ ವ್ಯಾಪಾರ ನೈಜ ವ್ಯಾಪಾರಸ್ಥರೂ ಕೂಡ ಅಸೂಯೆ ಪಡುವಂತಿತ್ತು. ಪರಸ್ಪರ ಸ್ಪರ್ಧಾ ಮನೋಭಾವದಿಂದ ಮಕ್ಕಳು ನಾವೇ ಹೆಚ್ಚು ವ್ಯಾಪಾರ ಮಾಡಬೇಕು ಎಂಬ ಛಲದಿಂದ ಪೋಷಕರನ್ನು ಕರೆದು ತಮ್ಮ ಸಾಮಗ್ರಿ ಖರೀದಿಸಲು ಒತ್ತಾಯಿಸುತ್ತಿದ್ದರು.

ಪಾಲಕರು, ಶಿಕ್ಷಕರು ಅತಿ ಉತ್ಸಾಹದಿಂದ ಮಕ್ಕಳು ಸಂತೆಯಲ್ಲಿ ತಂದ ವಸ್ತುಗಳ ಖರೀದಿಯಲ್ಲಿ ಮುಗಿಬಿದ್ದರು. ಸಂತೆಯಲ್ಲಿ ಪಾಲ್ಗೊಂಡ ಪಾಲಕರು ಶಿಕ್ಷಕರು ಮಕ್ಕಳು ತಯಾರಿಸಿ ತಂದಿದ್ದ ಇಡ್ಲಿ ಸಾಂಬಾರ್, ಪುಲಾವ್ ಸವಿದು ಸಂಭ್ರಮಿಸಿದರು.

ಈ ವಿಶೇಷ ಹಳ್ಳಿ ಸಂತೆಯಲ್ಲಿ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರು, ಸರ್ವ ಸದಸ್ಯರು, ಪಾಲಕರು, ಸಹ ಶಿಕ್ಷಕರು ಮುದ್ದು ವಿದ್ಯಾರ್ಥಿಗಳು ಪಾಲ್ಗೊಂಡು ಸಂತೆಯನ್ನು ಯಶಸ್ವಿಗೊಳಿಸಿದರು.

## ಸರ್ವಜ್ಞ ಜಯಂತಿ ಆಚರಣೆ: ವಚನಗಳು ಜೀವನಕ್ಕೆ ಸ್ಫೂರ್ತಿದಾಯಕ

**ಗುಳೇದಗುಡ್ಡ :** ಪ್ರತಿಯೊಬ್ಬರೂ ಸಂತ ಕವಿ ಸರ್ವಜ್ಞ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಡೆದರೆ ಮಾತ್ರ ಸರ್ವಜ್ಞ ಜಯಂತಿ ಆಚರಣೆ ಸಾರ್ಥಕವಾಗುತ್ತದೆ. ತ್ರಿಪದಿ ವಚನಗಳು ಅತ್ಯಂತ ಸರಳ ಭಾಷೆಯಲ್ಲಿದ್ದು, ಜನರ ಬದುಕಿಗೆ ಹತ್ತಿರವಾಗಿವೆ, ಜೀವನಕ್ಕೂ ಸ್ಫೂರ್ತಿದಾಯಕವಾಗಿವೆ ಎಂದು ದಂಡಾಧಿಕಾರಿಗಳೂ ಆದ ತಹಶೀಲ್ದಾರ ಮಂಗಳಾ ಎಂ. ಹೇಳಿದರು.

ಪಟ್ಟಣದ ತಹಶೀಲ್ದಾರ ಕಚೇರಿಯಲ್ಲಿ ತ್ರಿಪದಿ ಕವಿ, ಸಂತ ಸರ್ವಜ್ಞ ಜಯಂತಿ ಕಾರ್ಯಕ್ರಮದಲ್ಲಿ ಸರ್ವಜ್ಞ ಭಾವಚಿತ್ರಕ್ಕೆ ವಿಶೇಷ ಪೂಜೆ ನೆರವೇರಿಸಿ ಮಾತನಾಡಿ, ಸಮಾಜಕ್ಕೆ ಉತ್ತಮ ಸಂದೇಶ ನೀಡಿದ ಆದಿಕವಿ ಸರ್ವಜ್ಞ ವಚನಗಳನ್ನು ಪ್ರತಿಯೊಬ್ಬರೂ ತಮ್ಮ ಬದುಕಿನಲ್ಲಿ ಪಾಲಿಸಿಕೊಂಡು ನಡೆಯಬೇಕು ಎಂದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ಶ್ರೀಶೈಲ ಕುಂಬಾರ, ಸಿಂಧೂರ ತೋಳಮಟ್ಟಿ, ಬಸವರಾಜ ಕುಂಬಾರ, ಪರುಶರಾಮ ನಂದವಾಡಗಿ, ಕಚೇರಿಯ ವಿಜಯಮಹಾಂತೇಶ ಕಟ್ಟಿಮನಿ, ಮಲ್ಲಿಕಾರ್ಜುನ ತುಪ್ಪದ, ಆಕಾಶ ಉದಗಟ್ಟಿ, ಪ್ರಕಾಶ ಗಾಯದ, ಮುತ್ತು ಅಚನೂರ ಇತರರು ಇದ್ದರು.



## ಸನಾತನ ಸಂಸ್ಕೃತಿಯ ರಕ್ಷಕ ಶಿವಾಜಿ: ಡಾ. ಕಾಜಗಾರ

**ಗುಳೇದಗುಡ್ಡ:** ಶಿವಾಜಿ ಮಹಾರಾಜರು ಗೋವುಗಳಿಗೆ, ಮಹಿಳೆಯರಿಗೆ ದೇವದೇವತೆಯರ ಸ್ಥಾನಮಾನ ನೀಡಿದ ಧೀರ. ಮೋಘಲರ, ಸುಲ್ತಾನರ ದಾಳಿಗಳಿಂದ ತತ್ತರಿಸಿ ಹೋಗುವಂತಹ ಸ್ಥಿತಿಯಲ್ಲಿ ನಮ್ಮ ಸನಾತನ ಧರ್ಮ ಸಂಸ್ಕೃತಿಯನ್ನು ರಕ್ಷಿಸಿದವರೆಂದರೆ ಅದು ಶಿವಾಜಿ ಮಹಾರಾಜರು ಎಂದು ಪಟ್ಟಣದ ವೈದ್ಯ ಡಾ.ಮಹಾಂತೇಶ ಕಾಜಗಾರ ಹೇಳಿದರು.



ಅವರು ಪಟ್ಟಣದ ತಹಸೀಲ್ದಾರ ಕಚೇರಿಯಲ್ಲಿ ತಾಲೂಕು ಆಡಳಿತದಿಂದ ನಡೆದ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಶಿವಾಜಿ ಮಹಾರಾಜರು ಹಿಂದೂ ಧರ್ಮವನ್ನು ಉಳಿಸಿ ಬೆಳೆಸಿದ್ದಷ್ಟು ಅಲ್ಲದೇ ಜೈವಿಕ ಕೃಷಿಗೆ ಮೂಲ ಆಕಳು. ಆ ಆಕಳಿಗೆ ತೊಂದರೆ ಕೊಟ್ಟವರನ್ನು ಶಿಕ್ಷಿಸುತ್ತಿದ್ದರು ಎಂದು ಹೇಳಿದರು.

ತಹಸೀಲ್ದಾರ ಮಂಗಳಾ ಎಂ. ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಜ್ಞಾನಸಿಂಧು ಸಂಗೀತ ಬಳಗದ ಕುಮಾರಿ ರೇಖಾ ಮಡಿವಾರ ಪ್ರಾರ್ಥಿಸಿದರು. ಮಹಾದೇವ ಜಗತಾಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಭಾವಸಾರ ಕ್ಷತ್ರಿಯ ಸಮಾಜದ ಹಿರಿಯರಾದ ಬಾಬು ಬೊಂಬಲೇಕರ, ಮಹಿಂದ್ರಕರ, ಮಾವಲಿ, ದಶರಥ ಮಹಿಂದ್ರಕರ ಹಾಗೂ ವಾರಕರಿ ಸಂತ ಮಂಡಳಿಯಿಂದ ದೇವಿ ಅಭಂಗಗಳು ಕೇಳುಗರ ಮನದಲ್ಲಿ ಆಧ್ಯಾತ್ಮೀಕ ಜಾಗೃತಿ ಮೂಡಿಸಿದವು.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ತುಪ್ಪದ, ಭಾವಿಕಟ್ಟಿ, ಕಲೆಗಾರ, ಸಂಗಮ, ಅಗಡಿ, ಸುಗತೆ, ವಾಲಿಕಾರ ದಂಡಿನ, ಅನ್ನಂ ರಾಠೋಡ, ಬಂಡಿವಡ್ಡರ, ಭಜಂತ್ರಿ, ರಾಜಾಪುರ, ಪತ್ತಾರ, ಮ್ಯಾದಾರ, ಬಂತಲ್ ಸೇರಿದಂತೆ ಇತರರು ಇದ್ದರು.

## ಬೆಳಗಾವಿ ಜಿಲ್ಲಾ ಚುಸಾಪ ಬೆಳ್ಳಿಹಬ್ಬ ಮತ್ತು ಜಿಲ್ಲಾ ಸಮ್ಮೇಳನ

**ಬೆಳಗಾವಿ :** ಮಾರ್ಚ್ 1 ಮತ್ತು 2 ರಂದು ಬೆಳಗಾವಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಇಪ್ಪತ್ತೈದು ವರ್ಷಗಳ ಪಯಣವನ್ನು ದಾಖಲಿಸುವ ರಜತ ಮಹೋತ್ಸವ ಮತ್ತು ನಾಲ್ಕನೆಯ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನಗಳನ್ನು ಮಹಾಂತೇಶ ನಗರದ ಮಹಾಂತ ಭವನದಲ್ಲಿ ಏರ್ಪಡಿಸಲಾಗಿದೆ.

ಮಾರ್ಚ್ 1, ಬೆಳಿಗ್ಗೆ 10 ಗಂಟೆಗೆ ಬೆಳ್ಳಿ ಹಬ್ಬದ ಉದ್ಘಾಟನೆ ಮಾಜಿ ಗೃಹಸಚಿವರೂ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಕಮಿಶನರ್ ಪಿ. ಜಿ. ಆರ್. ಸಿಂಧ್ಯಾ ಅವರಿಂದ ನೆರವೇರಲಿದ್ದು, ನಾಗನೂರು ರುದ್ರಾಕ್ಷಿ ಮಠದ ಡಾ. ಅಲ್ಲಮಪ್ರಭು ಮಹಾಸ್ವಾಮಿಗಳವರ ಮತ್ತು ಕಾರಂಜಿ ಮಠದ ಗುರುಸಿದ್ಧ ಸ್ವಾಮಿಗಳವರ ಸಾನಿಧ್ಯದಲ್ಲಿ , ರಾಜ್ಯ ಚುಸಾಪ ಸಂಚಾಲಕರಾದ ಡಾ. ಎಂ. ಜಿ. ಆರ್. ಅರಸ್ ಅವರ ಅಧ್ಯಕ್ಷತೆಯಲ್ಲಿ , ಹಾಗೂ ಇತರ ಹಲವು ಗಣ್ಯರ ಉಪಸ್ಥಿತಿಯಲ್ಲಿ ಸಮಾರಂಭದ ಶುಭಾರಂಭವಾಗಲಿದೆ.

ಉದ್ಘಾಟನೆ ನಂತರ ಬೆಳಗಾವಿ ಜಿಲ್ಲೆಯವರೇ ಆದ ಪ್ರಸಿದ್ಧ ಕವಿ ಡಾ. ಎಂ. ಅಕ್ಬರ ಅಲಿ ಅವರ ಜನ್ಮ ಶತಮಾನೋತ್ಸವದ ನಿಮಿತ್ಯ ವಿಶೇಷ ಉಪನ್ಯಾಸವಿರುತ್ತದೆ. ಮುಂಜಾನೆ 11-30 ರಿಂದ ಬಹುಭಾಷಾ ಚುಟುಕು ವಾಚನಗೋಷ್ಠಿ ನಡೆಯಲಿದ್ದು , ಒಂಭತ್ತು ಭಾಷೆಗಳ ಹದಿನಾಲ್ಕು ಕವಿಗಳು ಚುಟುಕು ವಾಚನ ಮಾಡಲಿದ್ದಾರೆ.

ಮಧ್ಯಾಹ್ನ 2-30 ಕ್ಕೆ ವಿವಿಧ ಕವಿಗಳ ನೂತನ ಚುಟುಕು ಕೃತಿಗಳ ಬಿಡುಗಡೆ, 3-15 ಕ್ಕೆ ರಾಜ್ಯ ಮಟ್ಟದ ಚುಟುಕು ವಾಚನ ಸ್ಪರ್ಧೆ, ಸಂಜೆ 5-30 ಕ್ಕೆ ಇಪ್ಪತ್ತೈದು ಸಾಧಕರಿಗೆ ರಜತ ಸನ್ಮಾನ , 6-30 ರಿಂದ ಹಾಸ್ಯ ರಸಾಯನ ಮತ್ತು ಲಾವಣಿ ಲಾಸ್ಯ ಕಾರ್ಯಕ್ರಮಗಳು ನಡೆಯಲಿವೆ.

ಮಾರ್ಚ್ 3 ರಂದು ಬೆಳಿಗ್ಗೆ 9 ಕ್ಕೆ ಸಮ್ಮೇಳನದ ಸರ್ವಾಧ್ಯಕ್ಷರ ಮೆರವಣಿಗೆ, 9-30 ರಿಂದ ಸಮ್ಮೇಳನದ ಉದ್ಘಾಟನಾ ಸಮಾರಂಭವಿದ್ದು ಶರಣ ಸಾಹಿತ್ಯ ಪರಿಷತ್ತಿನ ರಾಜ್ಯ ಅಧ್ಯಕ್ಷ ಡಾ. ಸಿ. ಸೋಮಶೇಖರ್ ಅವರು ಉದ್ಘಾಟಿಸಲಿದ್ದಾರೆ. ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಸಾನಿಧ್ಯದಲ್ಲಿ ಜಿಲ್ಲೆಯ ಹಿರಿಯ ಚುಟುಕು ಕವಿ ಅಪ್ಪಾಸಾಹೇಬ ಅಲಿಬಾದಿ ಸರ್ವಾಧ್ಯಕ್ಷತೆ ವಹಿಸುವರು. ಡಾ. ರತ್ನಾ ಹಾಲಪ್ಪಗೌಡ ಮೈಸೂರು ಮತ್ತು ಇತರ ಗಣ್ಯರು ಉಪಸ್ಥಿತರಿರುವರು.

ನಂತರ ಚುಟುಕು ಸಾಹಿತ್ಯದ ಕುರಿತು ವಿಶೇಷ ಉಪನ್ಯಾಸ, ಮಹಿಳಾ ಚುಟುಕು ವಾಚನ ಗೋಷ್ಠಿ, ಎಲ್ಲ ತಾಲೂಕಾ ಘಟಕಗಳಿಗೆ ರಜತ ಗೌರವ, ಚುಟುಕು ವಾಚನ ಸ್ಪರ್ಧೆ ಮತ್ತು ಚುಟುಕು ಕೃತಿಗಳ ಸ್ಪರ್ಧೆ ಬಹುಮಾನ ವಿತರಣೆ ಮೊದಲಾದ ಕಾರ್ಯಕ್ರಮಗಳಿರುತ್ತವೆ. ಮಧ್ಯಾಹ್ನ 3-30 ರಿಂದ ಸಮಾರೋಪ ಸಮಾರಂಭ ನಡೆಯಲಿದ್ದು ವಿಶ್ವಲಿಂಗಾಯತ ಧರ್ಮಪೀಠದ ಜಗದ್ಗುರು ಶ್ರೀ ಬಸವಪ್ರಭು ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಪ್ರೊ. ಸಿದ್ದು ಯಾಪಲಪರವಿ ಅವರು ಸಮಾರೋಪ ಭಾಷಣ ಮಾಡಲಿದ್ದಾರೆ. ಸರ್ವಾಧ್ಯಕ್ಷರ ಸನ್ಮಾನವಿದ್ದು ಡಾ. ಎಂ.ಜಿ.ಆರ್. ಅರಸ್ ಮತ್ತಿತರ ಗಣ್ಯರು ಉಪಸ್ಥಿತರಿರುವರು.

ಎರಡೂ ದಿವಸಗಳ ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿ ಸಾಹಿತ್ಯಾಸಕ್ತರಲ್ಲಿ ಮನವಿ ಮಾಡಿಕೊಳ್ಳಲಾಗಿದೆ.

# ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಪಾಲಕರ ಸಹಕಾರ ಅತ್ಯವಶ್ಯಕ: ಜತ್ತಿ



**ವಿಜಯಪುರ** : ದಿನಕ್ಕೊಂದು ಆವಿಷ್ಕಾರಗಳ ಮೂಲಕ ಶರವೇಗದಲ್ಲಿ ಪ್ರಗತಿಪಥದತ್ತ ಸಾಗುತ್ತಿರುವ ಇಂದಿನ ಜಗತ್ತಿನಲ್ಲಿ ಸಮಾಜದಲ್ಲಿ ಬಾಳಿ ಬದುಕಬೇಕಾದ ಪ್ರತಿಯೊಂದು ಮಗುವಿಗೆ ಗುಣಮಟ್ಟದ ಶಿಕ್ಷಣ ಅತ್ಯವಶ್ಯಕವಾಗಿದೆ. ಅದಕ್ಕಾಗಿ ಶಿಕ್ಷಣ ಸಂಸ್ಥೆಗಳು ಹಾಗೂ ಶಿಕ್ಷಕರು ಪ್ರಾಮಾಣಿಕತೆಯಿಂದ ಪ್ರತಿಯೊಬ್ಬ ಮಗುವಿನ ಕಡೆಗೆ ಗಮನಹರಿಸಿ ಗುಣಮಟ್ಟದ ಶಿಕ್ಷಣ ನೀಡಿ ಆ ಮಗುವನ್ನು ಸಮಾಜದಲ್ಲಿ ಜವಾಬ್ದಾರಿಯುತ ಸುಸಂಸ್ಕೃತ ನಾಗರಿಕರನ್ನಾಗಿ ಮಾಡಬೇಕು ಎಂದು ನಗರದ ಶ್ರೀ ಸಿದ್ದೇಶ್ವರ ಕೋಚಿಂಗ್ ಕ್ಲಾಸೆಸ್ ಸಂಸ್ಥಾಪಕ ಅಧ್ಯಕ್ಷ ಸುರೇಶ ಜತ್ತಿ ಹೇಳಿದರು.

ಕನ್ನಡ ಪ್ರೇಮಿಗಳ ತವರೂರು ಕನ್ನಡಿಗರೇ ತುಂಬಿರುವ ಜತ್ತ ತಾಲೂಕಿನ ಮುಚ್ಚಂಡಿ ಗ್ರಾಮದ ನ್ಯೂಇಂಗ್ಲೀಷ್‌ಸ್ಕೂಲ್‌ಶಾಲೆಯಲ್ಲಿ ಹಮ್ಮಿಕೊಂಡ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಪ್ರಶಸ್ತಿ ವಿತರಣಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.


ಮೂಲಭೂತ ಹಕ್ಕುಗಳಲ್ಲಿ ಶಿಕ್ಷಣವೂ ಒಂದು ಎಂದರೆ ತಪ್ಪಾಗಲಾರದು. ಬಡತನದ ಕಾರಣದಿಂದಾಗಿ ಇನ್ನೂ ಕೂಡ ಕೆಲ ಹಳ್ಳಿಗಳಲ್ಲಿ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸದೇ ಕೂಲಿ ನಾಲಿ ಮಾಡಲು ಕಳುಹಿಸುವುದು ಕಂಡುಬರುತ್ತಿದೆ, ಅದಕ್ಕಾಗಿ ಅಂತಹ ಪಾಲಕರಿಗೆ ಶಿಕ್ಷಣದ ಮಹತ್ವದ ಕುರಿತು ಅರಿವು ನೀಡಿ ಮಗುವನ್ನು ಶಾಲೆಗೆ ಸೇರಿಸಲು ಸಹಕರಿಸಬೇಕು. ಎಷ್ಟೇ ಕಷ್ಟವಾದರೂ ಕೂಡ ಮಗುವಿಗೆ ಶಿಕ್ಷಣ ಕೊಡಲು ತಂದೆ ತಾಯಿಗಳು ಪ್ರಯತ್ನಿಸಬೇಕು.

ಬ್ರಹ್ಮ ವಿಷ್ಣು ಮಹೇಶ್ವರ ಸ್ವರೂಪಿಗಳಾದ ಗುರು ವೃಂದದವರು ಮಗುವಿನ ಏಳಿಗೆಗಾಗಿ ಹಗಲಿರುಳು ಶ್ರಮಿಸಲು ಪ್ರಯತ್ನಿಸಬೇಕು ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದ ಇನ್ನೋರ್ವ ಅತಿಥಿ ಸಿದ್ದಪ್ಪ ಮಾಚೆಟ್ಟಿ ಮಾತನಾಡಿ, ಜೀವಂತ ದೇವಾಲಯಗಳಾದ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಾದ ತಾವುಗಳು ಶ್ರದ್ಧೆ,ಭಕ್ತಿಯಿಂದ ಪಾಠವನ್ನು ಆಲಿಸಿದರೆ ಉತ್ತಮ ಶಿಕ್ಷಣ,ಸಂಸ್ಕಾರ ಪಡೆದುಕೊಳ್ಳುವುದರ ಜೊತೆಗೆ ನಾಗರಿಕನಾಗಿ ಬಾಳಲು ಸಾಧ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ ಐ.ಸಿ. ಪಾಟೀಲ ಮಾತನಾಡಿದರು. ಶಿಕ್ಷಕ ಸಂದೀಪ ಪಾಟೀಲ ನಿರೂಪಿಸಿದರು. ಪ್ರಭಾಕರ ಬಿರಾದಾರ ವಂದಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕರಾದ ಎಸ್. ಆರ್. ಜಮದಾಡೆ, ಆರ್ ಎಸ್ ಶೇಖ, ಎಂ.ಬಿ. ಕಣಗಿಲ್, ಜಿ.ಜೆ. ಹಿರೇಮಠ, ಎಸ್.ಡಿ. ಮಲ್ಲಾಡಿ, ಎಸ್ ಯು ಅಂಗಡಿ ಸೇರಿದಂತೆ ಮುಂತಾದವರು ಪಾಲ್ಗೊಂಡಿದ್ದರು.

# ಝಳಕಿ : ಅಂಜುಟಗಿ ಗ್ರಾಮ ಪಂಚಾಯತ 2024–25ನೇ ಸಾಲಿನ ನೂತನ ಉಪಾಧ್ಯಕ್ಷರ ಅವಿರೋಧ ಆಯ್ಕೆ



**ಝಳಕಿ** : ಸಮೀಪದ ಅಂಜುಟಗಿ ಗ್ರಾಮದ ಶಿವಬಸು ಅಚ್ಚಿಗಾರ, ಭೀಮರಾಯ ಬಬಲಾದ ಹಾಗೂ ಶರಣಪ್ಪ ಡೆಂಗಿ ಇವರ ಸಹಯೋಗದಲ್ಲಿ ಗ್ರಾಮ ಪಂಚಾಯತ 2024–25ನೇ ಸಾಲಿನ ಉಪಾಧ್ಯಕ್ಷರನ್ನಾಗಿ ಸುಜಾತಾ ರಾಯಪ್ಪ ಹರಳಯ್ಯ ಇವರನ್ನು ಅವಿರೋಧವಾಗಿ ಆಯ್ಕೆ ಮಾಡಿ ಎಲ್ಲ ಸದಸ್ಯರಿಗೆ ಸನ್ಮಾನಿಸಿ ಸಿಹಿ ಹಂಚುವದರೊಂದಿಗೆ ವಿಜಯೋತ್ಸವ ಆಚರಣೆ ಮಾಡಲಾಯಿತು.

ಗ್ರಾಮದ ಕಾಂಗ್ರೆಸ್ಸ ಮುಖಂಡ ರಾಯಪ್ಪ ಹರಳಯ್ಯ ಇವರು ಗ್ರಾಮದ ಎಲ್ಲ ಸಮುದಾಯದ ಜನರ ಜ್ಯೋತೆಯಲ್ಲಿ ಹಲವಾರು ವರ್ಷಗಳಿಂದ ಸಮಾಜ ಸೇವಕರಂತೆ ಬಡಜನರ ನಲಿವು/ನೊವುಗಳು, ಕಷ್ಟ/ಸುಖಗಳಲ್ಲಿ ಒಂದಾಗಿ ಬೆರೆತು, ಎಲ್ಲರಿಗು ಸಹಾಯ ಮಾಡುವದನ್ನು ಕಂಡು ಗ್ರಾಮಸ್ಥರು ಇವರ ಪತ್ನಿಯನ್ನು 2022ರಲ್ಲಿ ಗ್ರಾ–ಪಂ ಸದಸ್ಯರನ್ನಾಗಿ ಆಯ್ಕೆಮಾಡಿ, 2022–23ನೇ ಸಾಲಿನ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಿದರು, ನಂತರ ಇದೆ ಅವಧಿಯ ಮೂರನೆಯ ನೂತನ ಉಪಾಧ್ಯಕ್ಷರನ್ನಾಗಿ ಸಹಕಾರದೊಂದಿಗೆ ಆಯ್ಕೆಮಾಡಿ ಎಲ್ಲ ಗ್ರಾಮ ಪಂಚಾಯತಗಳಿಗೆ ಮಾದರಿಯಾಗಿದ್ದಾರೆ.

ಅಂಜುಟಗಿ ಗ್ರಾಮದಲ್ಲಿ ಗ್ರಾಮಸ್ಥರೆ ನಿರ್ಧಾರ ಮಾಡುವ ಹಿತಾಸಕ್ತಿ ಉಳ್ಳವರು, ಇಲ್ಲಿ ಯಾವುದೆ ಜಾತಿ/ಭೇದ/ಭಾವ ಮಾಡದೆ ಎಲ್ಲರಿಗು ಅವಕಾಶ ಸಿಗಬೇಕು, ಪ್ರಾಮಾಣಿಕ, ಪ್ರಭುದ್ದ, ಬಡವರ ಕರೆಗೆ ಓ ಗೊಡುವಂತಹ ವ್ಯಕ್ತಿಗಳನ್ನು ಇಲ್ಲಿನ ಜನರು ಆಯ್ಕೆಮಾಡಿ ಯಾವುದೆ ತಾರ ತಮ್ಯಗಳಿಲ್ಲದೆ ಎಲ್ಲರು ಒಂದೆ ಎನ್ನುವಂತೆ ನಡದುಕೊಳ್ಳುತ್ತಾರೆ, ಕಾರಣ ಗ್ರಾಮದಲ್ಲಿ ಯಾವುದೇ ಕೊಮು ಗಲಭೆ, ಗಲಾಟೆಗಳು ಆಗಬಾರದು ಎಲ್ಲರು ಒಂದೆ ತಾಯಿಯ ಮಕ್ಕಳಂತೆ ಇರುವದು ಒಳ್ಳೆಯದು ಆದ್ದರಿಂದ ಇಲ್ಲಿ ಎಲ್ಲ ಸಮುದಾಯದವರು ಕುಡಿಕೊಂಡು ನಿರ್ಧಾರ ಮಾಡುತ್ತಾರೆ ಎಂದು ವಿಜಯೊತ್ಸವ ಆಚರಣೆ ಮಾಡಿ ರಾಯಪ್ಪ ಹರಳಯ್ಯ ಸಂತೊಷ ವ್ಯಕ್ತಪಡಿಸಿದರು.

ಈ ಸಂದರ್ಬದಲ್ಲಿ ನೂಡಲ್ ಅಧಿಕಾರಗಳಾಗಿ ನಂದೀಪ ರಾಠೋಡ,ಗ್ರಾ–ಪಂ ಅಧ್ಯಕ್ಷ ಶರಣವ್ವ ಬಬಲಾದ, ಸದಸ್ಯರಾದ ಅಂಬಣ್ಣ ಭತಗುಣಕಿ, ಹುಸೇನಬಾಶಾ ಮನಗೂಳಿ, ಚಂದ್ರಭಾಗಾ ಹೂಗಾರ, ಸಂಗಪ್ಪ ಪೂಜಾರಿ, ಸ್ವಾಮಕ್ಕ ಹೂಗಾರ, ಕಂಠೆಪ್ಪ ಪರಗೊಂಡ, ಜ್ಯೋತಿ ಹತ್ತಿ, ಭೀಮರಾಯ ಬಬಲಾದ,, ರತ್ನಾಬಾಯಿ ನಾಯ್ಕೋಡಿ, ಸುವರ್ಣಾ ಕವಡಿ, ಶರಣಪ್ಪ ಡೆಂಗಿ, ಮಲ್ಲಮ್ಮ ಅಲಬಗೊಂಡ, ಬಂಡಪ್ಪ ಅಲಬಗೊಂಡ, ಶಿವಬಸು ಅಚ್ಚಿಗಾರ, ಗ್ರಾ–ಪಂ ಅಭಿವೃದ್ಧಿ ಅಧಿಕಾರಿ ಎಸ್.ಎಸ್.ಶಿವಣಗಿ, ಕಾರ್ಯದರ್ಶಿ ಸಾವಿತ್ರಿ ಗಾಯಕವಾಡ, ಗ್ರಾ–ಪಂ ಎಲ್ಲ ಸಿಬ್ಬಂದಿವರ್ಗ, ಅಂಜುಟಗಿ ಗ್ರಾಮದ ಎಲ್ಲಸಮುದಾಯದಹಿರಿಯರು,ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಜನಪದ ಸಂಸ್ಕೃತಿಯನ್ನು ರಕ್ಷಿಸಬೇಕಾಗಿದೆ: ಡಾ. ಜ್ಯೋತಿರ್ಲಿಂಗ ಹೊನಕಟ್ಟಿ



**ವಿಜಯಪುರ** : ಜನಪದ ಸಾಹಿತ್ಯ, ಜನಪದ ಹಾಡು–ಕಥೆಗಳಲ್ಲಿ ಜೀವನಾನುಭವವಿದೆ. ಅನಕ್ಷರಸ್ಥರಿಂದ ರಚಿಸಲ್ಪಟ್ಟಿದ್ದರೂ ಅದು ಸಂಸ್ಕೃತಿಯ ವೈಭವವನ್ನು ಹೊಂದಿದೆ ಎಂದು ಜನಪದ ಕಲೆಗಾರ ಡಾ. ಜ್ಯೋತಿರ್ಲಿಂಗ ಹೊನಕಟ್ಟಿ ಹೇಳಿದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಡಾ. ಎಂ.ಎನ್. ವಾಲಿ ಪ್ರತಿಷ್ಠಾನ ಮತ್ತು ಡಾ. ಸರಸ್ವತಿ ಚಿಮ್ಮಲಗಿ ಅವರ ಯುಗದರ್ಶಿನಿ ಪ್ರತಿಷ್ಠಾನಗಳ ದತ್ತಿ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ವೀರಶೈವ ಲಿಂಗಾಯತ ಸಮುದಾಯ ಭವನದ ಜ್ಞಾನಜ್ಯೋತಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ವೇದಿಕೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರೊ. ಲಕ್ಷ್ಮೀ ?ಮೀ ಅನುಭವ ಮಂಟಪದಲ್ಲಿ ಶಿವಶರಣೆಯರು ವಿಷಯ ಕುರಿತು ಉಪನ್ಯಾಸ ನೀಡಿದರು. ವೇದಕಾಲದಲ್ಲಿ ಹೆಣ್ಣಿಗೆ ಸ್ವಾತಂತ್ರ ?ಯ ಇದ್ದಿದ್ದಿಲ್ಲ. ಹೆಗಿಗೆ ಯಂತ್ರದಂತೆ ಯಾತನೆ ಅನುಭವಿಸುತ್ತಿದ್ದ ಹೆಣ್ಣಿಗೆ ಗಂಡಿಗೆ ಸಮಾನವಾದ ಸ್ಥಾನ ನೀಡಿ ದೈವತ್ವಕ್ಕೇರಿಸಿದ ಖ್ಯಾತಿ ಬಸವಾದಿ ಶರಣರಿಗೆ ಸಲ್ಲುತ್ತದೆ ಎಂದು ಹೇಳಿದರು.

ತಾಳಿಕೋಟೆಯ ಶಿವಲೀಲಾ ಮುರಾಳ ಅವರು ಜಾನಪದಲ್ಲಿ ಗರತಿ ವಿಷಯ ಕುರಿತು ಉಪನ್ಯಾಸ ನೀಡಿದರು. ಇಂದು ತವರಿನ ಬುತ್ತಿ ಬದನೆಕಾಯಿ ಪಲ್ಲೆ, ಕಾರೆಳ್ಳು ಹಿಂಡಿ, ಕೆನೆಮೊಸರು ಮಾಯವಾಗಿ ಅವುಗಳ ಸ್ಥಾನದಲ್ಲಿ ಬ್ರೆಡ್ಡು, ಪಿಜ್ಜಾ, ನೋಡಲ್ಸ್‌ಗಳು ಸೇರಿಕೊಂಡಿವೆ. ಇದರಿಂದಾಗಿ ಹಳ್ಳಿಯ ಜಾನಪದ ಸಂಸ್ಕೃತಿಯ ಸೊಗಡು ಇಲ್ಲದಾಗಿದೆ ಎಂದು ಹೇಳಿದರು.

ಅಧ್ಯಕ್ಷ ಸ್ಥಾನ ವಹಿಸಿಕೊಂಡಿದ್ದ ಡಾ. ಎಂ.ಎಸ್. ಮದಭಾವಿ ಕರ್ನಾಟಕದಲ್ಲಿ ಕಂಠಸ್ಥವಾದ ಜನಪದ ಸಾಹಿತ್ಯ ಗ್ರಂಥಸ್ಥವಾಗಿ ಪ್ರಕಟಗೊಳ್ಳಲು ಹಲಸಂಗಿ ಗೆಳೆಯರು ಕಾರಣವಾದರೆಂದು ಹೇಳಿದರು.

ದಾಸೋಹಿಗಳಾದ ಡಾ. ಅಶೋಕ ವಾಲಿ, ಡಾ. ಸರಸ್ವತಿ ಚಿಮ್ಮಲಗಿ, ಡಾ. ಉಷಾ ಹಿರೇಮಠ ಮಾತನಾಡಿದರು. ತಿಕೋಟಾದ ಪೂ.ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ವಹಿಸಿದ್ದರು.

ಇದೇ ಸಂದರ್ಭದಲ್ಲಿ ಜನಪದ ಹಾಡಿಕೆ, ಸಾಧಕರಿಗೆ ಸನ್ಮಾನಗಳ ಕಾರ್ಯಕ್ರಮಗಳು ಕೂಡಾ ಜರುಗಿದವು.

ಪರಿಷತ್ತಿನ ಜಿಲ್ಲಾಧ್ಯಕ್ಷ ಜಂಬುನಾಥ ಕಂಚ್ಯಾಣಿ ಪ್ರಾಸ್ತಾವಿಕವಾಗಿ ಮಾತನಡಿದರು. ಡಿ.ಕೆ. ರಾಠೋಡ ಶಿಕ್ಷಕರು ಸ್ವಾಗತಿಸಿದರು. ಈರಣ್ಣ ತೊಂಡಿಕಟ್ಟಿ ವಂದಿಸಿದರು. ಶಿಕ್ಷಕ ಮಹಾಂತೇಶ ಝುಂಡೆ ಕಾರ್ಯಕ್ರಮ ನಿರೂಪಿಸಿದರು.

ಮುಗಳಖೋಡದ ಹೊನಕಟ್ಟಿ ಜಾನಪದ ಕಲಾ ವೃಂದದವರು ಜಾನಪದ ಗೀತೆಗಳನ್ನು ಹಾಡಿ ಪ್ರೇಕ್ಷಕರನ್ನು ತಣಿಸಿ ರಂಜಿಸಿದರು. ಸಮಾರಂಭದಲ್ಲಿ ಡಾ. ಸಂಗಮೇಶ ಮೇತ್ರಿ, ವಿ.ಸಿ. ನಾಗಠಾಣ, ಸಿದ್ರಾಮಪ್ಪ ಉಪ್ಪಿನ, ಡಾ. ವಿ.ಡಿ. ಐಹೊಳ್ಳಿ, ವಿದ್ಯಾವತಿ ಅಂಕಲಗಿ, ಗಾಯತ್ರಿ ಪತ್ತಾರ, ಬಿ.ಸಿ. ಸಾರವಾಡ, ಆರ್. ಆರ್. ಹಂಚನಾಳ, ಪ್ರೊ. ಬಿ.ಎನ್. ಪಾಟೀಲ, ಸೋಮನಗೌಡ ಪಾಟೀಲ, ಎ.ಎಸ್. ಕೋರಿ, ಕಾಶಿನಾಥ ಅಣೆಪ್ಪನವರ, ಎಸ್.ಬಿ. ದೊಡಮನಿ, ಈಶ್ವರಗೊಂಡ, ಎ.ಎಸ್. ಕಂಚ್ಯಾಣಿ, ಅಮರೇಶ ಸಾಲಕ್ಕಿ, ಬಿ.ಎಂ. ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

# ಯೋಧರು ಹಾಗೂ ರೈತರು ಈ ದೇಶದ ರಕ್ಷಕರು: ಆಸಂಗಿ




**ವಿಜಯಪುರ** : ಪ್ರತಿಯೊಬ್ಬ ಪ್ರಜೆ ದೇಶಕ್ಕಾಗಿ ಯಾವುದೇ ಕ್ಷಣದಲ್ಲಿ ತ್ಯಾಗಕ್ಕೆ ಸಿದ್ಧರಿರಬೇಕೆಂದು ದ್ರೋಣಾ ಕರಿಯರ್ ಆಕೆಡೆಮಿ ಸಂಸ್ಥಾಪಕ ಕಲ್ಲೇಶ ಆಸಂಗಿ ಹೇಳಿದರು.

ನಗರ ಹೊರವಲಯದ ಹಿಟ್ನಳ್ಳಿಯ ಕೃಷಿ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿ ಸಂಘದ ವತಿಯಿಂದ ಪುಲ್ವಾಮಾ ಹುತಾತ್ಮ ಯೋಧರ ಸ್ಮರಣಾರ್ಥ ಸೋಮವಾರಹಮ್ಮಿಕೊಂಡವೀರನಮನ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶಕಾಯುವಸೈನಿಕಹಾಗೂವಿಶ್ವಕ್ಕೆಅನ್ನ ನೀಡುವ ರೈತರು ಸದಾ ತ್ಯಾಗಿಗಳು. ಅವರನ್ನು ಪ್ರತಿಯೊಬ್ಬರು ಪ್ರತಿನಿತ್ಯ ನೆನೆಯಲೇಬೇಕು. ಅತ್ಯಂತ ಕ್ಲಿಷ್ಟಕರ ಸಂದರ್ಭದಲ್ಲಿ ಯೋಧರು ಮಳೆ,ಗಾಳಿ,ಬಿಸಿಲನ್ನು ಲೆಕ್ಕಿಸದೆ ಗಡಿ ಕಾಯಲು ಸದಾ ಸಿದ್ದರಿರುತ್ತಾರೆ. ಪುಲ್ವಮಾ ದಾಳಿಯಲ್ಲಿ ವೈರಿಗಳು ಸಂಚು ರೂಪಿಸಿ ಯೋಧರ ಸಾವಿಗೆ ಕಾರಣರಾಗುತ್ತಾರೆ. ಆದರೆ ನಮ್ಮ ದೇಶದ ಯೋಧರು ಅದಕ್ಕೆ ಪ್ರತೀಕಾರವಾಗಿ ದಾಳಿ ನಡೆಸಿದವರನ್ನು ಸದೆಬಡೆದಿದ್ದನ್ನು ಎಳೆಎಳೆಯಾಗಿ ವಿವರಿಸಿದರು.

ಸಹ ವಿಸ್ತರಣಾ ನಿರ್ದೇಶಕ ಡಾ. ರವೀಂದ್ರ ಬೆಳ್ಳಿ ಮಾತನಾಡಿ, ಪ್ರತಿ ವಿದ್ಯಾರ್ಥಿಯಲ್ಲಿ ದೇಶಭಕ್ತಿ, ದೇಶಪ್ರೇಮ, ತ್ಯಾಗ ಮನೋಭಾವನೆ, ಹೊಂದಿರಬೇಕಾದದ್ದುಬಹಳಮುಖ್ಯವಾಗಿದ್ದು, ಕೃಷಿ ಪದವೀಧರರೂ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ಸ್ಮರಿಸಿದರು.

ಅಧ್ಯಕ್ಷತೆ ವಹಿಸಿದ್ದ ಡೀನ್ ಡಾ. ಅಶೋಕ ಎಸ್. ಸಜ್ಜನ ಮಾತನಾಡಿ, ವಿದ್ಯಾರ್ಥಿಗಳು ಸದಾ ಜಾಗೃತರಾಗಿರಬೇಕು. ದೇಶದ ಬಗ್ಗೆ ಅಭಿಮಾನ ಹೊಂದಿರಬೇಕು. ತಮ್ಮ ವ್ಯಾಸಂಗದ ಅವಧಿಯಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಅನುಕೂಲವಾಗುವಂತೆ, ಅದರಲ್ಲಿ ಸೇನೆಯಲ್ಲಿ ಅಧಿಕಾರಿಗಳಾಗಿ ಸೇವೆ ಸಲ್ಲಿಸಲು ಬೇಕಾಗುವ ಸಿಡಿಎಸ್ ಪರೀಕ್ಷೆಗೆ ತಯಾರಿ ಮಾಡಲು ವ್ಯವಸ್ಥೆ ಕಲ್ಪಿಸಲಾಗುವುದೆಂದರು.

ಇದೇ ಸಂದರ್ಭದಲ್ಲಿ ಪುಲ್ವಾಮಾ ದಾಳಿಯ ಕುರಿತು ಭಾಷಣ ಮಾಡಿದ ಇಂದ್ರಮ್ಮ, ವಿವೇಕ, ಚಿನ್ಮಯ ವಿದ್ಯಾರ್ಥಿಗಳನ್ನು ಸತ್ಕರಿಸಲಾಯಿತು.

ಹುತಾತ್ಮ ವೀರಯೋಧರ ಸ್ಮರಣಾರ್ಥ ಮಹಾವಿದ್ಯಾಲಯದ ಹೊರಗಡೆ ಕ್ಯಾಂಡಲ್ ದೀಪ ಬೆಳಗಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ವಿದ್ಯಾರ್ಥಿ ಸಂಘದ ಅಧ್ಯಕ್ಷ ವಿರೇಶ ಹವಾಲ್ದಾರ ಸ್ವಾಗತಿಸಿದರು.

ಸುಮಿತ ಕೋರೆ ನಿರೂಪಿಸಿ, ವಂದಿಸಿದರು. ಮಹಾವಿದ್ಯಾಲಯದ ಶಿಕ್ಷಕ, ಶಿಕ್ಷಕೇತರು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ಹೋರಾಟಕ್ಕೆ ವಿವಿಧ ಸಂಟನೆಗಳ ಬೆಂಬಲ

## ಮೌಲ್ವಿಗಳು, ಫಾದರ್‌ಗಳನ್ನು ಭೇಟಿ ಮಾಡಿದ ಹೋರಾಟಗಾರರು



**ಕೊಪ್ಪಳ** : ಕಾರ್ಖಾನೆ ವಿರುದ್ಧ ಹೋರಾಟಕ್ಕೆ ಪಾತೀತ ಬೆಂಬಲ ವ್ಯಕ್ತವಾಗಿದೆ. ಗವಿಶ್ರೀಗಳು ಬೆಂಬಲ ಸೂಚಿಸುತ್ತಲೇ ಹೋರಾಟಗಾರರು ಬುಧವಾರ ಮುಸ್ಲಿಮ್ ಧರ್ಮಗುರುಗಳು ಮತ್ತು ಕ್ರಿಶ್ಚಿಯನ್ ಧರ್ಮಗುರುಗಳನ್ನು ಭೇಟಿ ಮಾಡಿ ಹೋರಾಟಕ್ಕೆ ಆಹ್ವಾನಿಸಿದರು. ಜತೆಗೆ ಆಟೋ ಚಾಲಕರು ಸೇರಿ ವಿವಿಧ ಸಂಟನೆಗಳ ಪದಾಧಿಕಾರಿಗಳು ಸ್ವ–ಯಂ ಪ್ರೇರಿತವಾಗಿ ಆಗಮಿಸಿ ಬೆಂಬಲ ಘೋಷಿಸಿದರು.

ಸಂಸದ ರಾಜಶೇಖರ ಹಿಟ್ನಾಳ ಮಾತನಾಡಿ, ನಾವು ಎಷ್ಟು ಗಳಿಸಿದರೂ ಅನುಭವಿಸಲು ಆರೋಗ್ಯ ಬೇಕು. ಕಾರ್ಖಾನೆ ಧೂಳಿನಿಂದ ನಮ್ಮ ಆರೋಗ್ಯ ಹಾಳಾಗುತ್ತದೆ. ರೋಗ ಬಂದರೆ ಹಣ ತೆಗೆದುಕೊಂಡು ಏನು ಮಾಡುವುದು ? ಆರೋಗ್ಯ ಕೊಳ್ಳಲಾಗದು. ಶ್ರೀಗಳ ಸಲಹೆಯಂತೆ ಪಾತೀತವಾಗಿ ನಮ್ಮೂರು ಉಳಿಸಲು ಹೋರಾಟ ಮಾಡೋಣ ಎಂದು ಹೋರಾಟ ಬೆಂಬಲಿಸಿದರು.

ಶಾಸಕ ರಾವೇಂದ್ರ ಹಿಟ್ನಾಳ ಮಾತನಾಡಿ, ನಮ್ಮ ಮೇಲೆ ಜವಾಬ್ದಾರಿ ಹೆಚ್ಚಿದೆ. ನಾವೂ ನಿಯೋಗ ಕೊಂಡೊಯ್ದು ಸಿಎಂ ಹಾಗೂ ಡಿಸಿಎಂಅವರಿಗೆಮನವಿಮಾಡಿಕೊಳ್ಳೋಣ. ಪಾತೀತವಾಗಿ ಅವರಿವರನ್ನು ಟೀಕಿಸದೆ ನಮ್ಮ ಹೋರಾಟ ರೂಪಿಸೋಣ. ಕೇವಲ ಬಂದ್?ಗೆಹೋರಾಟಸೀಮಿತವಾಗದಿರಲಿ. ಇದನ್ನು ನಿರಂತರವಾಗಿ ಮುನ್ನಡೆಸೋಣ. ಎಲ್ಲ ಸಂಟನೆಗಳು, ಮುಖಂಡರು, ಮಹಿಳಾ ಸಂಟನೆಗಳು ಸಕ್ರಿಯವಾಗಿ ಹೋರಾಟದಲ್ಲಿ ಭಾಗಿಯಾಗಬೇಕೆಂದುಮನವಿಮಾಡಿದರು.

ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಡಾ. ಬಸವರಾಜ ಕ್ಯಾವಟರ್ ಮಾತನಾಡಿ, ಉಕ್ಕು, ಕಬ್ಬಿಣ ಕಾರ್ಖಾನೆಗಳಿಂದ ಪರಿಸರ ಸಾಕಷ್ಟು ಹಾಳಾಗಲಿದೆ.

ಈಗಿರುವ ಕಾರ್ಖಾನೆಗಳಿಂದ ನಿತ್ಯ ಜನರು ನರಕ ಅನುಭವಿಸುತ್ತಿದ್ದಾರೆ. ಮತ್ತೊಂದು ದೊಡ್ಡ ಕಾರ್ಖಾನೆ ಬಂದರೆ ನಮ್ಮ ಬದುಕು ಇನ್ನಷ್ಟು ದುಸ್ಥರವಾಗಲಿದೆ. ಇದಕ್ಕೆ ಅವಕಾಶ ನೀಡುವುದು ಬೇಡ. ಶ್ರೀಗಳ ಶಕ್ತಿ ನಮ್ಮೊಂದಿಗಿದೆ ಎಂದು ಉತ್ಸಾಹ ತುಂಬಿದರು.

**ಧರ್ಮಗುರುಗಳ ಭೇಟಿ** : ಸಂಚಾಲಕರು ಬುಧವಾರ ಬೆಳಗ್ಗೆ ಗವಿಶ್ರೀಗಳ ಒಪ್ಪಿಗೆ ಪಡೆದ ನಂತರ ಕೊಪ್ಪಳದ ಯೂಸುಫಿಯಾ ಮಸೀದಿಯಲ್ಲಿ ಮುಸ್ಲಿಮ್–ಧರ್ಮಗುರುಗಳನ್ನು ಭೇಟಿ ಮಾಡಿದರು. ಮುಸ್ಲಿಮ್–ಸಮುದಾಯ ನಾಯಕರ ನೇತೃತ್ವದಲ್ಲಿ ಹೋರಾಟಕ್ಕೆ ಮನವಿ ಮಾಡಿದರು. ಮುಫ್ತಿ ನಜೀರ್–ಅಹಮದ್–ತಸ್ಕೀನ್–ಅವರು ಜನಪರ ಹೋರಾಟಕ್ಕೆ ತಾವು ಸದಾ ಬೆನ್ನೆಲುಬಾಗಿ ನಿಲ್ಲುವ ಭರವಸೆ ನೀಡಿದರು. ಬಳಿಕ ಕ್ರಿಶ್ಚಿಯನ್–ಚರ್ಚ್‌ಗಳ ಕೊಪ್ಪಳ ತಾಲೂಕು –ದರ್ಸ್–ಅಸೋಸಿಯೇಷನ್– ಅಧ್ಯಕ್ಷ ಜೆ.ರವಿಕುಮಾರ್– ಸಹ ಹೋರಾಟ ಕಚೇರಿ ಬಳಿ ಆಗಮಿಸಿ ಬೆಂಬಲ ಘೋಷಿಸಿದರು. ತಮ್ಮ ಸಂಟನೆಯಿಂದಲೂ ಹೋರಾಟದಲ್ಲಿ ಭಾಗಿಯಾಗುವುದಾಗಿ ತಿಳಿಸಿದರು. ಜತೆಗೆ ಬಂದ್ – ಯಶಸ್ವಿಗೊಳಿಸಲು ಹಲವು ಸಂಟನೆಗಳು ಬೆಂಬಲ ವ್ಯಕ್ತಪಡಿಸಿದವು.

**50 ಸಾವಿರ ಜನ ಭಾಗಿ ಸಾಧ್ಯತೆ** : 24ರ ಸೋಮವಾರದಂದು ಬೆಳಿಗ್ಗೆ 6 ಗಂಟೆಯಿಮದ ಸಾಯಂಕಾಲ 6 ಗಂಟೆವರೆಗೆ ಬಂದ್ ಇರಲಿದೆ. ಆಸ್ಪತ್ರೆ ಒಳ ರೋಗಿಗಳ ವಿಭಾಗ, ತುರ್ತು ಸೇವಾ ಸೇವೆಗಳು ಮಾತ್ರ ಇರಲಿವೆ. ಉಳಿದಂತೆ ಎಲ್ಲವೂ ಬಂದ್ ಆಗಲಿದೆ. ಬೆಳಿಗ್ಗೆ 9 ಗಂಟೆಗೆ ಗವಿಮಠದಿಂದ ಪ್ರತಿಭಟನೆ ಆರಂಭವಾಗಲಿದ್ದು, ಗಡಿಯಾರ ಕಂಬ ಸರ್ಕಲ್, ಜವಾಹರ ರೋಡ್, ಅಶೋಕ ಸರ್ಕಲ್‌ನಿಂದ ಸಾರ್ವಜನಿಕ ಮೈದಾನಕ್ಕೆ ಬರಲಿದೆ. ಅಲ್ಲಿ ಎಲ್ಲ ನಾಯಕರು ಪ್ರತಿಭಟನೆ ಉದ್ದೇಶಿಸಿ ಮಾತನಾಡುವರು. ಸುಮಾರು 50 ಸಾವಿರ ಜನ ಸೇರಲಿದ್ದು ಸರ್ಕಾರಕ್ಕೆ ಬಿಸಿ ಮುಟ್ಟಿಸಲಿದ್ದಾರೆ.

# ಕೋಣ ಹಸ್ತಾಂತರಿಸಿದ ಗ್ರಾಮಸ್ಥರು



**ಕೊಪ್ಪಳ** : ಜಿಲ್ಲೆಯ ಕುಷ್ಟಗಿ ತಾಲೂಕಿನ ಹನಾಮಸಾಗರ ಗ್ರಾಮದ ಬಳಿ ಕುಂಬಳಾವತಿ ದ್ಯಾಮಂಬಿಕಾ ದೇವಿಗೆ ಬಲಿಗೆಂದು ಮೀಸಲು ಇಟ್ಟಿದ್ದ ಕೋಣವನ್ನು ಕುಂಬಳಾವತಿ ಗ್ರಾಮಸ್ಥರು ಸ್ವ–ಯಂ ಪ್ರೇರಣೆಯಿಂದ ಸರಕಾರ–ಕ್ಕೆ ಹಸ್ತಾಂತರಿಸಿದರು.ಈ ಸಂಧರ್ಭದಲ್ಲಿ ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ ಅಧ್ಯಕ್ಷ ಶ್ರೀ ದಯಾನಂದ ಸ್ವಾಮೀಜಿ. ಹಾಗೂ ಹನುಮಸಾಗರ ಆರಕ್ಷಕ ಉಪನಿರಿಕ್ಷಕರು ಎಂ ಧನುಂಜಯ ಮತ್ತು ಗ್ರಾಮದ ಹಿರಿಯರಾದ ಸುಬ್ಬರಾವ್ ಕುಲಕರ್ಣಿ. ಮುತ್ತಣ್ಣ ನರಸಾಪುರ. ಸಿದ್ದಪ್ಪ ಸೂಡಿ. ಶರಣಪ್ಪ ಜಗ್ಗಲ ಹುಲ್ಲಪ್ಪ ವಡಿಗೇರಿ ಸೂಚಪ್ಪ ಭೋವಿ. ಮರೇಗೌಡ ಬೋಧುರು ಕಾರ್ಯಕರ್ತ ಶರಣಪ್ಪಕಮ್ಮಾರಹಾಗೂಗ್ರಾಮದ ಗುರು ಹಿರಿಯರು ಹಾಜರಿದ್ದರು.

ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಯಲ್ಲಿ ಕರ್ನಾಟಕ ಸರ್ಕಾರ. ಕೊಪ್ಪಳ ಜಿಲ್ಲಾ ಆಡಳಿತ. ಕುಷ್ಟಗಿ ತಾಲೂಕು ಆಡಳಿತ. ಹಾಗೂ ಪೊಲೀಸ್ ಇಲಾಖೆ. ಕುಂಬಳಾವತಿ ಶ್ರೀ ದ್ಯಾಮಾಂಬಿಕಾ ಜಾತ್ರೆಯಲ್ಲಿ ಯಾವುದೇ ಪ್ರಾಣಿಗಳ ಬಲಿಯಾಗದಂತೆ ಮುಂಜಾಗ್ರತವಾಗಿ ವ್ಯಾಪಾಕ ಪೊಲೀಸ್ ಬಂದೋಬಸ್ತ್ ಮಾಡಲಾಗಿದ್ದು.ಸದರಿವೇಳೆಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಸದರಿ ಜಾತ್ರೆಯಲ್ಲಿ ಯಾವುದೇ ಪ್ರಾಣಿ ಬಲಿ ನಡೆಯದೆ ಉತ್ತಮ ರೀತಿಯಲ್ಲಿ ಜಾತ್ರಾ ಮಹೋತ್ಸವ ಆಚರಿಸಿದ ಭಕ್ತ ಗ್ರಾಮಸ್ಥರಿಗೆ ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ ಅಧ್ಯಕ್ಷ ಎಂ ದಯಾನಂದ ಸ್ವಾಮೀಜಿ ಅಭಿನಂದಿಸಿದ್ದಾರೆ.

## ಪಂಚಾಯತ್ ಆಡಳಿತ ಮಂಡಳಿಯೊಂದಿಗೆ ಜಿ.ಪಂ ಸಿಇಓ ಸಭೆ: ವಿವಿಧ ಸ್ಥಳಗಳ ಪರಿಶೀಲನೆ

# ಮುನಿರಾಬಾದ ಡ್ಯಾಂ ಸಮಗ್ರ ಅಭಿವೃದ್ಧಿಗೆ ಕೈ ಜೋಡಿಸಿ: ರಾಹುಲ್ ರತ್ನಂ ಪಾಂಡೇಯ



**ಕೊಪ್ಪಳ** : ಕೊಪ್ಪಳ ತಾಲ್ಲೂಕಿನ ಮುನಿರಾಬಾದ್ ಡ್ಯಾಂ ಗ್ರಾಮ ಪಂಚಾಯತ್ ಸಮಗ್ರ ಅಭಿವೃದ್ಧಿ ಕೈಗೊಳ್ಳುವ ಕುರಿತಂತೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಅವರು ಮಂಗಳವಾರ ಮುನಿರಾಬಾದ್‌ಗೆ ಭೇಟಿ ನೀಡಿ, ವಿವಿಧ ಸ್ಥಳಗಳನ್ನು ಪರಿಶೀಲಿಸಿ ಅಲ್ಲಿನ ಆಡಳಿತ ಮಂಡಳಿಯೊಂದಿಗೆ ಸಭೆ ನಡೆಸಿದರು.

ಇದೇ ವೇಳೆ ಜಿ.ಪಂ ಸಿಇಓ ಅವರು ಮಾತನಾಡಿ, ಮುನಿರಾಬಾದ ಡ್ಯಾಂ ಗ್ರಾಮ ಪಂಚಾಯತಿ ಸಂಪೂರ್ಣ ಅಭಿವೃದ್ಧಿಪಡಿಸಲು ಕೆಲವು ತಾಂತ್ರಿಕ ಅಡಚಣೆಗಳಿದ್ದು, ಅವುಗಳನ್ನುಪರಿಹರಿಸಲುಮೇಲಾಧಿಕಾರಿಗಳಿಗೆಸಂಪೂರ್ಣ ವರದಿ ಸಿದ್ಧಪಡಿಸಿ ಸಲ್ಲಿಸಬೇಕಿದೆ. ಇದಕ್ಕಾಗಿ ಅಗತ್ಯ ಮಾಹಿತಿ ನೀಡಲು ಕ್ರಮ ಕೈಗೊಳ್ಳಬೇಕು. ಒಟ್ಟಾರೆ, ಮುನಿರಾಬಾದ್ ಡ್ಯಾಂ ಸಮಗ್ರ ಅಭಿವೃದ್ಧಿಗೆ ಗ್ರಾಮ ಪಂಚಾಯತ್ ಆಡಳಿತ ಮಂಡಳಿಯವರು ಕೈ ಜೋಡಿಸಬೇಕು ಎಂದು ಹೇಳಿದರು.

1993ರಲ್ಲಿ ಮುನಿರಾಬಾದ ಡ್ಯಾಂ ಹೊಸ ಗ್ರಾಮ ಪಂಚಾಯತ ಆಗಿ ರಚನೆಯಾಗಿದ್ದು, ಕಂದಾಯ ದಾಖಲೆಗಳ ಪ್ರಕಾರ ಮುನಿರಬಾದ ಯೋಜನಾ ಪ್ರದೇಶ ವೆಂದು ನಮೂದಾಗಿರುತ್ತದೆಂದು ಆಡಳಿತ ಮಂಡಳಿ ವಿವರಿಸಿದರು. ಗ್ರಾಮ ಪಂಚಾಯತ ಮುಂದುಗಡೆ 280 ಫುಟ್ ಜಾಗ ಲಭ್ಯವಿದ್ದು, ವಾಣಿಜ್ಯ ಮಳಿಗೆಗಳನ್ನು ಜಿಲ್ಲಾ ಮತ್ತು ತಾಲೂಕ ಪಂಚಾಯತಿ ಅನುದಾನದಲ್ಲಿ ನಿರ್ಮಿಸಿಕೊಡುವಂತೆ ಸಿಇಓರವರಿಗೆ ಮನವಿ ಮಾಡಿದರು. ಇದರಿಂದ ಗ್ರಾಮ ಪಂಚಾಯತಿಗೆ ಆದಾಯ ಸೃಜನೆಯಾಗುತ್ತದೆ ಎಂದರು.

ಗ್ರಾಮದಲ್ಲಿ ಮಹಿಳಾ ಸಂಜೀವಿನಿ ಸಂಘದ ಮಹಿಳೆಯರಿಂದ ಹೋಂ ಸ್ಟೇಗಳನ್ನು ನಿರ್ಮಿಸಲು ಜಾಗೆ ಇದ್ದವರು ಕೂಡಲೇ ಮಾಹಿತಿಯನ್ನು ನೀಡುವಂತೆ ಸಿಇಓ ಅವರು ಹೇಳಿದರು.

**ಗ್ರಾಮೀಣ ಸಂತೆಕಟ್ಟೆ ನಿರ್ಮಾಣ ಸ್ಥಳ ಪರಿಶೀಲನೆ:** ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ ಗ್ರಾಮೀಣ ಸಂತೆ ಕಟ್ಟೆ ನಿರ್ಮಿಸಲು ಈಗಾಗಲೇ ಹಳೆ ಪೊಲೀಸ್ ಠಾಣೆಯ ಜಾಗೆಯಲ್ಲಿ ಗ್ರಾಮೀಣ ಸಂತೆ ಕಟ್ಟೆ ನಿರ್ಮಿಸಲು ಸಿಇಓ ಅವರು ಸ್ಥಳ ವೀಕ್ಷಣೆ ಮಾಡಿದರು. ಇದಲ್ಲದೇ ವೀಕಪಂಪಾವನದಲ್ಲಿ ಅಣೆಕಟ್ಟು ನಿರ್ಮಿಸಿದ ಕುರಿತು ವಿಡಿಯೋ ಪ್ರದರ್ಶನ ವ್ಯವಸ್ಥೆ, ವಿಜ್ಞಾನ ಉದ್ಯಾನವನ, ಬೋಟಿಂಗ್ ವ್ಯವಸ್ಥೆ ಕಲ್ಪಿಸಲು ಪರಿಶೀಲನೆ ನಡೆಸಿದರು.

**ವಿದ್ಯಾರ್ಥಿಗಳಿಗಾಗಿ ತೋಟಗಾರಿಕೆ ತರಬೇತಿಯಲ್ಲಿ ಭಾಗಿ:** ಶಾಲಾ ವಿದ್ಯಾರ್ಥಿಗಳಿಗೆ ತೋಟಗಾರಿಕೆ ಇಲಾಖೆಯಿಂದ ಏರ್ಪಡಿಸಿದ್ದ, ತೋಟಗಾರಿಕೆಯ ಕುರಿತ ತರಬೇತಿಯಲ್ಲಿ ಭಾಗವಹಿಸಿದ ಸಿಇಓ ಅವರು, ತೋಟಗಾರಿಕೆಯಲ್ಲಿ ಕೂಡಾ ನಮ್ಮ ಜೀವನ ರೂಪಿಸಿಕೊಳ್ಳುವಷ್ಟು ಭವಿಷ್ಯವಿದ್ದು, ಓದಿನ ಕಡೆಗೆ ಗಮನಹರಿಸುವದರ ಜೊತೆಗೆ ತೋಟಗಾರಿಕೆ ಮಾಡಿಕೊಳ್ಳುವ ಕುರಿತು ಆಸಕ್ತಿ ವಹಿಸಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಶಾಲಾ ವಿದ್ಯಾರ್ಥಿಗಳಿಗೆ ವೈಯಕ್ತಿಕ ಶೌಚಾಲಯ ಕಡ್ಡಾಯವಾಗಿ ಬಳಕೆ ಮಾಡುವದು ಮತ್ತು ಕುಟುಂಬದ ಸದಸ್ಯರಿಗೆ ಮನವೊಲಿಸಬೇಕೆಂದು ತಿಳಿಸಿದರು.

**ಪಂಪಾವನಕ್ಕೆ ಭೇಟಿ:** ಸಿಇಓ ಅವರು ಪಂಪಾವನಕ್ಕೆ ಭೇಟಿ ನೀಡಿ, ಅಲ್ಲಿ ಅಗತ್ಯ ಇರುವ ಬೋಟಿಂಗ್ ಹಾಗೂ ವಿಜ್ಞಾನ ಉದ್ಯಾನವನ ನಿರ್ಮಿಸುವ ಕುರಿತು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿದರು.

# ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ: ಅವಧಿ ವಿಸ್ತರಣೆ

**ಕೊಪ್ಪಳ** : 2024–25ನೇ ಸಾಲಿಗೆ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅವಧಿಯನ್ನು ಮಾರ್ಚ್ 10 ರವರೆಗೆ ವಿಸ್ತರಿಸಲಾಗಿದೆ.

ಮೆಟ್ರಿಕ್ ನಂತರದ ಸ್ನಾತಕೋತ್ತರ ಪದವಿ, ವೃತ್ತಿಪರ ಪದವಿ ಮತ್ತು ವೃತ್ತಿಪರ ಸ್ನಾತಕೋತ್ತರ ಮತ್ತು ನರ್ಸಿಂಗ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಶುಲ್ಕ ಮರುಪಾವತಿಯ ಸದುಪಯೋಗ ಪಡಿಸಿಕೊಳ್ಳಬೇಕು.

ಅರ್ಹ ಆಸಕ್ತ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ವೆಬ್‌ಸೈಟ್ https://ssp.postmatric.karnataka.gov.inನ್ನು ಹಾಗೂ ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಮತ್ತು ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ವೆಬ್‌ಸೈಟ್ https://bcwd.karnataka.gov.inಗೆ ಭೇಟಿ ನೀಡಬೇಕು.

ಇಲಾಖಾ ಸಹಾಯವಾಣಿ, ದೂರವಾಣಿ ಸಂಖ್ಯೆ 8050770005, ಇ–ಮೇಲ್ bcwdhelpline@gmail.comನ್ನು ಅಥವಾ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ ಇ–ಮೇಲ್ postmatrichelp@karnataka.gov.inನ್ನು ಹಾಗೂ ದೂರವಾಣಿ ಸಂಖ್ಯೆ: 1902 ಗೆ ಸಂಪರ್ಕಿಸುವಂತೆ ಕೊಪ್ಪಳ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State